## ಅಧ್ಯಾಯ 15

# ಪರಲೋಕದಲ್ಲಿನ ಒಂದು ದೃಶ್ಯ

ಕೆಲವು ಸಾರಿ ಜನರು ಆಯಾಸದ ಕಾರಣದಿಂದ, ಕತ್ತಲೆಯಿಂದ ಬೆಳಕಿಗೆ ಹೋಗುವದರಿಂದ, ಮೊದಲು ಎಚ್ಚರಗೊಳ್ಳುವದರ ಕಾರಣದಿಂದ, ಅಥವಾ ತಲೆಗೆ ಒಂದು ಹೊಡೆತ ಬೀಳುವದರ ಕಾರಣದಿಂದ ಏಕಚಿತ್ತವನ್ನು ಕೊಡುವದಕ್ಕೆ ಅಶಕ್ತರಾಗಿರುತ್ತಾರೆ. ಏಕಚಿತ್ತದಿಂದ ಇರುವದಕ್ಕೆ ಅಶಕ್ತರಾಗಿರುವದು ಒಂದು ಭಯಾನಕವಾದ ಸಂಗತಿ. ಹೇಗೂ, ಈ ಒತ್ತಡವನ್ನು ಕ್ರೈಸ್ತರು ಅನುಭವಿಸಿದ ಒತ್ತಡದೊಂದಿಗೆ ಹೋಲಿಸುವದಕ್ಕೆ ಸಾಧ್ಯವಿಲ್ಲ. ದೇವರ ಮೇಲೆ ಮತ್ತು ಪ್ರಾಮುಖ್ಯವಾದದ್ದರ ಮೇಲೆ ಏಕಚಿತ್ತವುಳ್ಳವರಾಗಿ ಉಳಿಯುವದು ಅವರಿಗೆ ಕಷ್ಟಕರವಾಗಿದ್ದಿರಬಹುದು. ಪ್ರಕಟನೆ ಪುಸ್ತಕವು ಬರೆಯಲ್ಪಟ್ಟ ಉದ್ದೇಶಗಳಲ್ಲೊಂದು ಎಂದರೆ ದಬ್ಬಾಳಿಕೆಗೊಳಗಾಗಿದ್ದ ಕ್ರೈಸ್ತರಿಗೆ - ಯೋಹಾನನ ದಿನದಲ್ಲಿದ್ದ ಹಾಗೂ ಇಂದಿರುವ ಕ್ರೈಸ್ತರಿಗೆ - ಸರಿಯಾದ ದೃಷ್ಟಿಕೋನವನ್ನು ಕಾಪಾಡಿಕೊಂಡು ಹೋಗುವಂತೆ ಸಹಾಯ ಮಾಡುವದೇ ಆಗಿತ್ತು.

ಏಳು ಕೋಪದ ಪಾತ್ರೆಗಳ ಕುರಿತಾಗಿ ಮಾತನಾಡುವ 15 ಮತ್ತು 16 ಅಧ್ಯಾಯಗಳು, ಕ್ರೈಸ್ತರಿಗೆ ಈ ದೃಷ್ಟಿಕೋನವನ್ನು ಒದಗಿಸುತ್ತವೆ. 15ನೇ ಅಧ್ಯಾಯವು ಪುಸ್ತಕದಲ್ಲಿ ಅತ್ಯಂಥ ಕ್ಲುಪ್ತವಾದ ಅಧ್ಯಾಯವಾಗಿದ್ದು, ಅದು ಪಾತ್ರೆಗಳನ್ನು ಪರಿಚಯಿಸುತ್ತದೆ, ಅದೇ ವೇಳೆಯಲ್ಲಿ 16ನೇ ಅಧ್ಯಾಯವು ಪಾತ್ರೆಗಳು ಸುರಿಸಲ್ಪಡುವದನ್ನು ಚಿತ್ರಿಸುತ್ತದೆ.

ಪೌಲನು ಪ್ರತಿಯೊಬ್ಬ ಕ್ರೈಸ್ತನಿಗೂ ಕರೆಯನ್ನು ಕೊಡುವವನಾಗಿ “ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದು ಸದಾಕಾಲವೂ ಇರುವದು” (2 ಕೊರಿಂಥ 4:18) ಎಂದು ಹೇಳಿದನು. ಪ್ರಕಟನೆ 15ರಲ್ಲಿ, ಯೋಹಾನನು ದೇವರ ಯೋಜನೆ ಹಾಗೂ ಶಕ್ತಿ ವಿಷಯವಾಗಿ “ಕಾಣದಿರುವಂಥ” ಸಂಗತಿಗಳ ಬಗ್ಗೆ ಬರೆಯುತ್ತಾನೆ. ನಾವು ಈ ಸಂಗತಿಗಳ ಮೇಲೆ ಏಕಚಿತ್ತವನ್ನಿಡಬೇಕು.

## ಏಳು ಉಪದ್ರವಗಳನ್ನು ಹಿಡಿದುಕೊಂಡಿರುವ ಏಳು ಮಂದಿ ದೇವದೂತರು (15:1)

**1ಪರಲೋಕದಲ್ಲಿ ಆಶ್ಚರ್ಯಕರವಾದ ಮತ್ತೊಂದು ಮಹಾಲಕ್ಷಣವು ನನಗೆ ಕಾಣಿಸಿತು. ಏಳು ಮಂದಿ ದೇವದೂತರ ಕೈಯಲ್ಲಿ ಏಳು ಉಪದ್ರವಗಳಿದ್ದವು; ಇವು ಕಡೇ ಉಪದ್ರವಗಳು; ಇವುಗಳಲ್ಲಿ ದೇವರ ರೌದ್ರವು ಮುಗಿದಿರುವದು.**

**ವಚನ 1.** ಅಧ್ಯಾಯವು ಪರಲೋಕದಲ್ಲಿ ಆಶ್ಚರ್ಯಕರವಾದ ಮತ್ತೊಂದು ಮಹಾಲಕ್ಷಣವು

**ನನಗೆ ಕಾಣಿಸಿತು** ಎಂದು ಆರಂಭಗೊಳ್ಳುತ್ತದೆ. **ಲಕ್ಷಣವು** ಸಾಮಾನ್ಯವಾದದ್ದಕ್ಕಿಂತ ಹೊರಗಿರುವಂಥದ್ದನ್ನು, ಗಮನಾರ್ಹವಾದದ್ದನ್ನು ಸೂಚಿಸುತ್ತದೆ (12:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಆಶ್ಚರ್ಯಕರವಾದ** ಮತ್ತು **ಮಹಾ** ಎಂಬ ಪದಗಳು ಈ ವಿಚಾರವನ್ನು ಪುನರ್ದೃಢೀಕರಿಸುತ್ತವೆ. ಯೋಹಾನನು ನೋಡಿದ ಮೊದಲ "ಲಕ್ಷಣ"ವು ಸೂರ್ಯನನ್ನು ಧರಿಸಿದ್ದ ಸ್ತ್ರೀಯೊಬ್ಬಳದ್ದಾಗಿದ್ದರೆ (12:1), ಎರಡನೆಯ ಲಕ್ಷಣವು ಕೆಂಪಾಗಿದ್ದ ಮಹಾ ಘಟಸರ್ಪನದ್ದಾಗಿತ್ತು (12:3). ಈ **ಮತ್ತೊಂದು** ಲಕ್ಷಣ, ಪುಸ್ತಕದಲ್ಲಿ ಮೂರನೆಯ ಹಾಗೂ ಕೊನೆಯದ್ದಾಗಿದೆ. ಮೊದಲನೆಯ ಲಕ್ಷಣವು ದೈವಿಕ ಉದ್ದೇಶಕ್ಕೋಸ್ಕರವಾಗಿತ್ತು; ಎರಡನೆಯದ್ದು ಸೈತಾನನಿಂದಾಗುವ ವಿರೋಧದ ಕುರಿತಾಗಿತ್ತು; ಮತ್ತು ಮೂರನೆಯ ಲಕ್ಷಣವು ಅಂತಿಮ ಜಯದ ಲಕ್ಷಣವಾಗಿರುತ್ತದೆ.

ಯೋಹಾನನು ಕಂಡ "ಲಕ್ಷಣ" ಇದಾಗಿತ್ತು: **ಏಳು ಮಂದಿ ದೇವದೂತರ ಕೈಯಲ್ಲಿ ಏಳು ಉಪದ್ರವಗಳಿದ್ದವು; ಇವು ಕಡೇ ಉಪದ್ರವಗಳು; ಇವುಗಳಲ್ಲಿ ದೇವರ ರೌದ್ರವು ಮುಗಿದಿರುವದು.** ದೇವದೂತರಿಗೆ ವಾಸ್ತವಿಕವಾಗಿ ಉಪದ್ರವುಗಳು 7ನೇ ವಚನದ ವರೆಗೂ ಕೊಡಲ್ಪಡುವದಿಲ್ಲ; 1ನೇ ವಚನವು ಇಡೀ ಅಧ್ಯಾಯಕ್ಕೆ ಒಂದು ಶಿರೋನಾಮೆಯಂತಿರುತ್ತದೆ. ಈ ವಚನವು ಏಳು ನ್ಯಾಯತೀರ್ಪುಗಳಲ್ಲಿ ಮೂರನೆಯ ಹಾಗೂ ಅಂತಿಮ ಕಾಲಚಕ್ರವನ್ನು ಆರಂಭಿಸುತ್ತದೆ. ಮೊದಲನೆಯದ್ದು ಏಳು ಮುದ್ರೆಗಳು (4ರಿಂದ 7 ಅಧ್ಯಾಯಗಳು), ಮತ್ತು ಎರಡನೆಯದ್ದು ಏಳು ತುತೂರಿಗಳು (8ರಿಂದ 11 ಅಧ್ಯಾಯಗಳು). ಮೂರನೆಯ ಸರಣಿಯನ್ನು 15:1ರಲ್ಲಿ **ಏಳು ಉಪದ್ರಗಳು** ಎಂದು ಕರೆಯಲಾಗಿರುತ್ತದೆ.

"ಉಪದ್ರವ" ಎಂಬ ಪದವು ನಮಗೆ ಐಗುಪ್ತ್ಯದೇಶದ ಮೇಲೆ ಬಂದಂಥ ಹತ್ತು ಉಪದ್ರವಗಳನ್ನು ಜ್ಞಾಪಿಸುತ್ತದೆ - ದೇವರು "ಯಾರ ಮಾತಿನಂತೆ ಎಲ್ಲವೂ ನಡೆಯುತ್ತದೆ ಎಂಬುದನ್ನು ಫರೋಹನಿಗೆ ತೋರಿಸಿ ಕೊಡುವದಕ್ಕೆ ನೀಡಿದ ಅಂಚೆವ್ಯವಹಾರದ ಹತ್ತು-ಪಾಠಕ್ರಮಗಳು."[1] ಪ್ರಕಟನೆ 15 ಮತ್ತು 16 ಅಧ್ಯಾಯಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ, ಇಸ್ರಾಯೇಲ್ಯರು ಐಗುಪ್ತ್ಯದೇಶದಿಂದ ಪಲಾಯನ ಮಾಡಿದ ಕಾಲದ ಕುರಿತು ಪುನರಾವಲೋಕನ ಮಾಡಬೇಕಾದ ಅಗತ್ಯವಿರುತ್ತದೆ. ಈ ಎರಡು ಅಧ್ಯಾಯಗಳು "ಯೋಹಾನನ ಪುಸ್ತಕದಲ್ಲಿ ಬೇರೆ ಯಾವದೇ ಭಾಗಕ್ಕಿಂತಲೂ ಹೆಚ್ಚು ಸಂಪೂರ್ಣವಾದ ಹಾಗೂ ಕ್ರಮಬದ್ಧವಾದ ಸಂಕೇತಶಾಸ್ತ್ರವನ್ನು ಒಳಗೊಂಡಿರುತ್ತದೆ."[2] 15 ಮತ್ತು 16 ಅಧ್ಯಾಯಗಳಲ್ಲಿ ಐದು ಸಾರಿ, ಪಾತ್ರೆಗಳನ್ನು "ಉಪದ್ರವಗಳು" ಎಂದು ಕರೆಯಲಾಗಿದೆ (15:1, 6, 8; 16:9, 21). ಹತ್ತು ಮೂಲ ಉಪದ್ರವಗಳೊಳಗೆ ಐದು ಉಪದ್ರವಗಳು ಏಳು ಪಾತ್ರೆಗಳಲ್ಲಿ ಪ್ರತಿಬಿಂಬಿಸಲ್ಪಟ್ಟಿರುತ್ತವೆ:

> ನೀರು ರಕ್ತವಾಗಿ ಮಾರ್ಪಟ್ಟ ಮೊದಲ ಉಪದ್ರವವು (ವಿಮೋಚನಕಾಂಡ 7:14-25), ಎರಡನೆಯ ಹಾಗೂ ಮೂರನೆಯ ಪಾತ್ರೆಗೆ ಸಂಬಂಧ ಹೊಂದಿದೆ (ಪ್ರಕಟನೆ 16:3-7).
>
> ದೇಶವನ್ನೆ ಕಪ್ಪೆಗಳು ಆವರಿಸಿಕೊಂಡಂಥ ಎರಡನೆಯ ಉಪದ್ರವವು (ವಿಮೋಚನಕಾಂಡ 8:1-15), ಬಹುಶಃ ಮೂರು ಕಪ್ಪೆಗಳ ವಿಗ್ರಹವನ್ನು ಸೂಚಿಸುತ್ತಿರಬಹುದಾಗಿದೆ (ಪ್ರಕಟನೆ 16:13).
>
> ಪ್ರಾಣಿಗಳ ಮೇಲೆಯೂ ಮನುಷ್ಯರ ಮೇಲೆಯೂ ಹುಣ್ಣುಗಳು ಉಂಟಾದಂಥ ಆರನೆಯ ಉಪದ್ರವವು (ವಿಮೋಚನಕಾಂಡ 9:8-12), ಮೊದಲನೆಯ ಪಾತ್ರೆಯಿಂದಾದ ಫಲಿತಗಳನ್ನು ಪ್ರತಿಬಿಂಬಿಸಲ್ಪಟ್ಟಿರುತ್ತದೆ (ಪ್ರಕಟನೆ 16:2).

ಐಗುಪ್ತ್ಯದೇಶದ ಭೂಮಿಯನ್ನೆಲ್ಲಾ ವಿನಾಶಕ್ಕೀಡು ಮಾಡಿದ ಆನೇಕಲ್ಲಿನ ಮಳೆಯು (ವಿಮೋಚನಕಾಂಡ 9:18-35), ಏಳನೆಯ ಪಾತ್ರೆಯು ಸುರಿಸಲ್ಪಟ್ಟ ಬಳಿಕ ಉಂಟಾದ "ಆನೇಕಲ್ಲಿನ ಉಪದ್ರವ"ದಲ್ಲಿ ಪ್ರತಿಫಲನಗೊಳ್ಳುತ್ತದೆ (ಪ್ರಕಟನೆ 16:21).

ದೇಶವನ್ನೆಲ್ಲಾ ಕತ್ತಲೆಯು ಆವರಿಸಿಕೊಂಡಂಥ ಒಂಭತ್ತನೆಯ ಉಪದ್ರವವು (ವಿಮೋಚನಕಾಂಡ 10:21-29), ಐದನೆಯ ಪಾತ್ರೆಯಲ್ಲಾಗುವ ಕತ್ತಲೆಯಂತೆಯೇ ಇರುತ್ತದೆ (ಪ್ರಕಟನೆ 16:10, 11).

ಉಪದ್ರವದ ಸಾದೃಶ್ಯವು ಈ ಮುಂಚೆ ಪ್ರಕಟನೆ ಪುಸ್ತಕದಲ್ಲಿ ಬಳಸಲ್ಪಟ್ಟಿರುತ್ತದೆ (9:20; 11:6), ಆದರೆ ಈ ಉಪದ್ರವಗಳು ವಿಶಿಷ್ಟವಾದವುಗಳಾಗಿವೆ. ಅವುಗಳನ್ನು **ಕಡೇ** ಉಪದ್ರವಗಳೆಂದು ಕರೆಯಲಾಗಿದೆ. ಅಷ್ಟುಮಾತ್ರವಲ್ಲದೆ, ಈ ಉಪದ್ರವಗಳು ಅಥವಾ ಪಾತ್ರೆಗಳು "ಕಡೇ" ಎಂದು ಕರೆಯಲ್ಪಟ್ಟಿರುತ್ತವೆ, ಯಾಕೆಂದರೆ "ಇವುಗಳಲ್ಲಿ ದೇವರ ರೌದ್ರವು *ಮುಗಿದಿರುವದು"* (ಒತ್ತಿ ಹೇಳಿದ್ದು ನನ್ನದು). KJVಯಲ್ಲಿ "ಭರ್ತಿಗೊಳ್ಳುತ್ತದೆ" ಎಂದಿದ್ದರೆ NKJVಯಲ್ಲಿ "ಸಂಪೂರ್ಣಗೊಳ್ಳುತ್ತದೆ" ಎಂದಿರುತ್ತದೆ. **ಮುಗಿದಿರುವದು** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು τελέω (*teleō*) ಎಂದಾಗಿದ್ದು, ಅದರರ್ಥವು "ಸಂಪೂರ್ಣಗೊಂಡಿತು" ಅಥವಾ "ಮುಕ್ತಾಯಗೊಂಡಿತು"[3] ಎಂದಾಗಿದೆ. ಅದು "ನೆರವೇರಿಕೆಗೆ, ಸಂಪೂರ್ಣತೆಗೆ, ಪಕ್ವತೆಗೆ ಬಂದಿರುವಂಥದ್ದನ್ನು"[4] ಸೂಚಿಸುತ್ತದೆ. ಯೇಸುವು ಶಿಲುಬೆಯ ಮೇಲಿರುವ ವೇಳೆ ಇದೇ ಮಾತುಗಳನ್ನು ಬಳಸಿ "ತೀರಿತು" ಎಂದು ಕೂಗಿದನು (ಯೋಹಾನ 19:30). ಈ ಪದವು *ಎಲ್ಲವೂ* ಮುಗಿಯಿತು ಅಥವಾ ಸಂಪೂರ್ಣಗೊಂಡಿತು ಎಂಬುದನ್ನು ಸೂಚಿಸುವದಿಲ್ಲ, ಆದರೆ ಚರ್ಚಿಸಲ್ಪಡುತ್ತಿರುವ ನಿರ್ದಿಷ್ಟವಾದ ಸಂಗತಿ ಮಾತ್ರವೇ ಮುಗಿಯಿತೆಂಬುದನ್ನು ಸೂಚಿಸುತ್ತದೆ. ಪ್ರಕಟನೆ 15 ಮತ್ತು 16ರಲ್ಲಿ, ಚರ್ಚೆಯಲ್ಲಿರುವ ಅಂಶವು ಮನುಷ್ಯರೊಂದಿಗೆ ದೇವರ ವ್ಯವಹಾರಗಳ ವಿಷಯವಾಗಿರುತ್ತದೆ. ದೇವರು ಮನುಷ್ಯನ ಅಸಡ್ಡೆಯ ಚಿಪ್ಪಿನನ್ನು ತೂರಿಕೊಂಡು ಪ್ರವೇಶಿಸುವದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡಿದ್ದನು, ಆದರೆ ಪ್ರಯೋಜನವಾಗಿರಲಿಲ್ಲ. ಆದ್ದರಿಂದ ತಾನು ಆರಂಭಿಸಿದ್ದನ್ನು "ಮುಗಿಸಬೇಕಾದ" ಸಮಯವು ದೇವರಿಗೆ ಬಂದಿತ್ತು. ಈಗ ದೇವರು ಮನುಷ್ಯನ ಪಾಪವನ್ನು ನೆನಪಿಸಿಕೊಳ್ಳುವ ಸಮಯವಾಗಿತ್ತು. ಉಪದ್ರವಗಳು ಪುನಃ ಪ್ರಕಟನೆ 18:4, 8; 21:9; 22:18ರಲ್ಲಿ ಪ್ರಸ್ತಾಪಿಸಲ್ಪಡವವು - ಆದರೆ ಆ ವಾಕ್ಯಭಾಗಗಳು 16ನೇ ಅಧ್ಯಾಯದ ಉಪದ್ರವಗಳನ್ನೇ ಮರಳಿ ಜ್ಞಾಪಿಸುತ್ತವಷ್ಟೆ.

ಅಧ್ಯಾಯದೊಳಗೆ ಅನಂತರದಲ್ಲಿ, "ದೇವರ ರೌದ್ರದಿಂದ ತುಂಬಿದ್ದ ಏಳು ಚಿನ್ನದ ಪಾತ್ರೆಗಳು" ಎಂದು (15:7) ಕರೆಯಲ್ಪಟ್ಟಿವೆ. ನ್ಯಾಯತೀರ್ಪಿನ ಮೂರು ಚಕ್ರಗಳು ಕೆಲವು ವಿಧಗಳಲ್ಲಿ ಸಮಾನತೆಯನ್ನು ಹೊಂದಿವೆ, ಆದರೆ ಈ ವಿಧದಲ್ಲಿ ಸಹ ವ್ಯಕ್ತಪಡಿಸಬಹುದಾದ ಗತಿವಿಧಾನವೊಂದು ಸಹ ಇರುತ್ತದೆ:

ಚಕ್ರ 1 - ಮುದ್ರೆಗಳು ಒಡೆಯಲ್ಪಡುತ್ತವೆ: ಪ್ರಕಟನೆ
ಚಕ್ರ 2 - ತುತೂರಿಗಳು ಊದಲ್ಪಡುತ್ತವೆ: ಎಚ್ಚರಿಕೆ
ಚಕ್ರ 3 - ರೌದ್ರದ ಪಾತ್ರೆಗಳು ಸುರಿಯಲ್ಪಡುತ್ತವೆ: ದಂಡನೆ

ತುತೂರಿಗಳ ಹಾಗೂ ಪಾತ್ರೆಗಳ ನಡುವೆ ಒಂದು ನಿಕಟವಾದ ಸಂಬಂಧವು ಇರುತ್ತದೆ (16:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಆದರೆ ಒಂದು ಮಹತ್ವಪೂರ್ಣವಾದ ವ್ಯತ್ಯಾಸವು

ಸ್ಪಷ್ಟವಾಗಿ ಕಾಣಿಸುತ್ತದೆ. *ತುತೂರಿಗಳು* ಮೂರರಲ್ಲೊಂದು ಭಾಗವನ್ನು ಬಾಧಿಸುವದಕ್ಕಷ್ಟೆ ಸೀಮಿತವಾಗಿದ್ದರೆ (8:7-12; 9:15, 18), *ಪಾತ್ರೆಗಳ* ಮೂಲಕವಾಗುವ ಪರಿಣಾಮದ ಮೇಲೆ ಯಾವದೇ ಮಿತಿಯನ್ನು ಹಾಕಲಾಗಿರುವದಿಲ್ಲ. ಹಿಂದಕ್ಕೆ ಹಿಡಿದಿಟ್ಟುಕೊಳ್ಳುವಿಕೆಯೆಂಬುದೇ ಇರುವದಿಲ್ಲ; ದೇವರ ರೌದ್ರವು ಏನೂ ಬೆರಸದೆ ಸುರಿಸಲ್ಪಡುತ್ತದೆ (ವ. 7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

## ಗಾಜಿನ ಸಮುದ್ರ (15:2-4)

**2ಬೆಂಕಿ ಬೆರೆತ ಗಾಜಿನ ಸಮುದ್ರವೋ ಎಂಬಂತೆ ಏನೋ ಒಂದು ನನಗೆ ಕಾಣಿಸಿತು. ಆಗ ಮೃಗದ ವಿಗ್ರಹಕ್ಕೆ ನಮಸ್ಕರಿಸದೆಯೂ ಅದರ ಹೆಸರಿನ ಅಂಕೆಯನ್ನು ಮುದ್ರೆಹಾಕಿಸಿಕೊಳ್ಳದೆಯೂ ಅದರ ಮೇಲೆ ಜಯ ಹೊಂದಿದವರು ದೇವರ ಸೇವಾರ್ಥವಾದ ವೀಣೆಗಳನ್ನು ಕೈಯಲ್ಲಿ ಹಿಡಿದುಕೊಂಡು ಗಾಜಿನ ಸಮುದ್ರದ ಬಳಿಯಲ್ಲಿ ನಿಂತು**
**3ದೇವರ ದಾಸನಾದ ಮೋಶೆಯ ಹಾಡನ್ನೂ ಯಜ್ಞದ ಕುರಿಯಾದಾತನ ಹಾಡನ್ನೂ ಹಾಡುತ್ತಾ –**

**ದೇವರಾದ ಕರ್ತನೇ, ಸರ್ವಶಕ್ತನೇ,**
**ನಿನ್ನ ಕೃತ್ಯಗಳು ಮಹತ್ತಾದವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ;**
**ಸರ್ವಜನಾಂಗಗಳ ಅರಸನೇ, ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ;**
**4ಕರ್ತನೇ, ನಿನ್ನ ನಾಮಕ್ಕೆ ಭಯಪಡದವರೂ ಅದನ್ನು ಘನವಾದದ್ದೆಂದು**
**ಒಪ್ಪಿಕೊಳ್ಳದವರೂ ಯಾರಾದರೂ ಇದ್ದಾರೇ?**
**ನೀನೊಬ್ಬನೇ ಪರಿಶುದ್ಧನು;**
**ನಿನ್ನ ನೀತಿಯುಳ್ಳ ಕೃತ್ಯಗಳು ಪ್ರಕಾಶಕ್ಕೆ ಬಂದದರಿಂದ**
**ಎಲ್ಲಾ ಜನಾಂಗಗಳು ಬಂದು ನಿನ್ನ**
**ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು**
**ಎಂದು ಹೇಳಿದರು.**

ಉಪದ್ರವಗಳನ್ನು ಹಿಡಿದಿದ್ದ ದೇವದೂತರನ್ನು 1ನೇ ವಚನದಲ್ಲಿ ಪರಿಚಯಿಸಲಾಗುತ್ತದಾದ್ದರಿಂದ, ಆ ವಿಪತ್ತುಗಳನ್ನು ಜರುಗಿಸುವ ಕೆಲಸವು ತಕ್ಷಣದಲ್ಲೇ ಮುಂದುವರೆಯಲಿದೆ ಎಂದು ನಾವು ನಿರೀಕ್ಷಿಸಬಹುದು. ಬದಲಾಗಿ, ಒಂದು ಆರಾಧನೆಯ ದೃಶ್ಯವು ಮೊದಲು ಬರುತ್ತದೆ (ವಚನಗಳು 2-4). ಈ ಮೂರರೊಳಗೆ ಪ್ರತಿಯೊಂದು ಚಕ್ರದಲ್ಲಿಯೂ ಆರಾಧನೆಯು ಮೂಲಭೂತ ನಮೂನೆಯಾಗಿರುತ್ತದೆ: 4 ಮತ್ತು 5 ಅಧ್ಯಾಯಗಳು ವಾಚಕನನ್ನು ಏಳು ಮುದ್ರೆಗಳಿಗಾಗಿ ಸಿದ್ಧಗೊಳಿಸಿದವು, ಮತ್ತು ಆ ಎರಡು ಅಧ್ಯಾಯಗಳ ಅವಿಭಾಜ್ಯ ಭಾಗವು ಎರಡು ಆರಾಧನೆಯ ದೃಶ್ಯಗಳನ್ನೊಳಗೊಂಡಿರುತ್ತದೆ (4:8-11; 5:8-14). ಏಳು ತುತೂರಿಗಳ ವಿಭಾಗದಲ್ಲಿ, ತುತೂರಿಗಳನ್ನು ಹಿಡಿದ ದೇವದೂತರಿಗೆ (8:2) ಊದುವದಕ್ಕೆ ಅನುಮತಿಯನ್ನು ಕೊಡುವದಕ್ಕೆ ಮುಂಚೆ (8:6, 7), ದೇವಜನರ ಪ್ರಾರ್ಥನೆಗಳು ಮೊದಲು ಮೇಲಕ್ಕೆ ಏರಿ ಹೋಗುತ್ತವೆ (8:3, 4). ವಾಚಕನಿಗೆ ನಿರಂತರವಾಗಿ ಆರಾಧನೆ ಹಾಗೂ ದೇವರ ಯೋಜನೆಗಳ ಮತ್ತು ಉದ್ದೇಶಗಳ ನಡುವಿನ ಸಂಬಂಧದ ಕುರಿತು ಜ್ಞಾಪಕ ಪಡಿಸಲಾಗುತ್ತದೆ. ಕೆಲವರು ಆರಾಧನೆಯನ್ನು ಮಾಡುವದು ಸಮಯದ ವ್ಯರ್ಥವಾಗಿದೆ ಎಂದು ನಂಬುತ್ತಾರೆ, “ನಾವು ಲೋಕದ ಸಮಸ್ಯೆಗಳ ಕುರಿತು ಹೊರ ಹೋಗಿ ಏನನ್ನಾದರೂ

*ಮಾಡಬೇಕಾಗಿರುತ್ತದೆ*" ಎಂದು ನಂಬುತ್ತಾರೆ. ಲೋಕದ ಸಮಸ್ಯೆಗಳ ಕುರಿತಾಗಿ ನಾವು "ಮಾಡ"ಬಹುದಾದ ಅತ್ಯಂತ ಪ್ರಾಮುಖ್ಯವಾದ ಸಂಗತಿಗಳಲ್ಲೊಂದೆಂದರೆ ದೇವರನ್ನು ಆರಾಧಿಸುವದೇ.

15ನೇ ಅಧ್ಯಾಯದಲ್ಲಿರುವ ಪರಲೋಕದ ಆರಾಧನೆಯ ದರ್ಶನವು 14ನೇ ಅಧ್ಯಾಯದ ಮುಕ್ತಾಯದಲ್ಲಿರುವ ನ್ಯಾಯತೀರ್ಪಿನ ದರ್ಶನವನ್ನು ಪರಾಕಾಷ್ಠೆಗೆ ಕೊಂಡೊಯ್ಯುತ್ತದೆ ಮತ್ತು ನ್ಯಾಯತೀರ್ಪಿನ ದಿನದ ನಂತರದಲ್ಲಿ ರಕ್ಷಣೆ ಹೊಂದಿರುವ ಎಲ್ಲರನ್ನೂ ಚಿತ್ರಿಸುವದಾಗಿದೆ ಎಂದು ಕೆಲವು ಲೇಖಕರು ಮನವರಿಗೆ ಹೊಂದಿರುತ್ತಾರೆ. ಹೇಗೂ, ದರ್ಶನವು ಯೋಹಾನನ ದಿನದಲ್ಲಿ ಮರಣಿಸಿದ ನಂಬಿಗಸ್ತ ಕ್ರೈಸ್ತರನ್ನು ಬಣ್ಣಿಸುವ ಒಂದು ಸಂಪೂರ್ಣ ಹೊಸ ವಿಭಾಗವಾಗಿರುತ್ತದೆಂಬುದನ್ನು ಹಲವಾರು ಅಂಶಗಳು ಸೂಚಿಸುತ್ತವೆ: (1) ದರ್ಶನವು ಹೊಸ ವಿಭಾಗದ ಸಿದ್ಧತೆಯ ಭಾಗವಾಗಿರುತ್ತದೆ - ರೌದ್ರದ ಏಳು ಪಾತ್ರೆಗಳನ್ನು ಸುರಿಯುವಿಕೆ. (2) "ಸಮುದ್ರ" ಅಡೆತಡೆ ಈಗಲೂ ಇರುತ್ತದೆ (4:6; 15:2); ಆದರೆ ಯುಗಾಂತ್ಯದಲ್ಲಿ ನಮಗೆ ಅದು ತಿಳಿದು ಬಂದಿರುವ ಪ್ರಕಾರ, "ಇನ್ನು ಸಮುದ್ರವೂ ಇಲ್ಲ" (21:1). (3) ಹಾಡುಗಾರರು ದೇವರಿಗೆ ಭಯಪಡುವ ಮನುಷ್ಯರು ಹಾಗೂ ಜನಾಂಗಗಳು ದೇವರ ಸನ್ನಿಧಿಗೆ ಬರುವ ಕುರಿತು ಮಾತಾಡಿದಾಗ, ಅವರು ಭವಿಷ್ಯತ್ಕಾಲರೂಪವನ್ನು ಬಳಸಿದರು (15:4).

ಹೇಗೂ, ಕಾಲಾನುಕ್ರಮವು ಈ ವಚನಗಳ ವಿಷಯದಲ್ಲಿ ನಿರ್ಣಾಯಕವಾಗಿರುವದಿಲ್ಲ. ಪ್ರಕಟನೆ ಪುಸ್ತಕದೊಳಗೆ ಕಾಲಾನುಕ್ರಮವು ಅತಿ ಪ್ರಾಮುಖ್ಯವಾದದ್ದಲ್ಲ ಎಂಬುದನ್ನು ನೆನಪಿಸಿಕೊಳ್ಳಿರಿ; ದರ್ಶನಗಳು ಕಾಲದೊಳಗೆ ಹಿಂದಕ್ಕೆ ಮತ್ತು ಮುಂದಕ್ಕೆ ಸಾಗುತ್ತಲಿರುತ್ತವೆ. 2ರಿಂದ 4 ವಚನಗಳಲ್ಲಿ ಬಣ್ಣಿಸಲಾಗಿರುವ *ಜಯದ* ದೃಶ್ಯವು ಪ್ರಾಮುಖ್ಯವಾದದ್ದು.

**ವಚನ 2.** ಯೋಹಾನನು ಹೀಗೆ ಹೇಳುತ್ತಾನೆ **ಬೆಂಕಿ ಬೆರೆತ ಗಾಜಿನ ಸಮುದ್ರವೋ ಎಂಬಂತೆ ಏನೋ ಒಂದು ನನಗೆ ಕಾಣಿಸಿತು. ಆಗ ಮೃಗದ ವಿಗ್ರಹಕ್ಕೆ ನಮಸ್ಕರಿಸದೆಯೂ ಅದರ ಹೆಸರಿನ ಅಂಕೆಯನ್ನು ಮುದ್ರೆಹಾಕಿಸಿಕೊಳ್ಳದೆಯೂ ಅದರ ಮೇಲೆ ಜಯ ಹೊಂದಿದವರು ದೇವರ ಸೇವಾರ್ಥವಾದ ವೀಣೆಗಳನ್ನು ಕೈಯಲ್ಲಿ ಹಿಡಿದುಕೊಂಡು ಗಾಜಿನ ಸಮುದ್ರದ ಬಳಿಯಲ್ಲಿ ನಿಂತು** ಇದ್ದನು. ಆಗಾಗ, ಯೋಹಾನನು ಕಂಡಿದ್ದು *ಅಕ್ಷರಶಃವಾದದ್ದಾಗಿರಲಿಲ್ಲ* ಎಂಬುದನ್ನು ಜ್ಞಾಪಿಸಲಾಗುತ್ತದೆ. ಅಂತಹ ಜ್ಞಾಪಕಪಡಿಸುವಿಕೆಗಳಲ್ಲಿ ಒಂದನ್ನು ಈ ವಿಧವಾದ ಮಾತುಗಳಲ್ಲಿ ತಿಳಿಸಲಾಗಿರುತ್ತದೆ.

4:6ರಲ್ಲಿ "ಸಿಂಹಾಸನದ ಮುಂದೆ ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರ" ಇತ್ತು. ಸಮುದ್ರವು ಸಮೀಪಿಸಲಾಗದಂಥ, ವಿಶೇಷವಾಗಿ ಕ್ರೈಸ್ತರು ಶರೀರಧಾರಿಗಳಾಗಿರುವ ವೇಳೆಯಲ್ಲಿ ಸಮೀಪಕ್ಕೆ ಹೋಗಲು ಸಾಧ್ಯವಿಲ್ಲದ ದೇವರ ಸ್ವಭಾವವನ್ನು ಪ್ರತಿನಿಧಿಸಬಹುದೆಂದು ಆ ವಾಕ್ಯದಲ್ಲಿ ಅಭಿಪ್ರಾಯ ಪಡಲಾಗಿತ್ತು (4:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 15ನೇ ಅಧ್ಯಾಯದಲ್ಲಿ ಒಂದು ಹೊಸ ಅಂಶವು ಸೇರ್ಪಡೆಗೊಳಿಸಲ್ಪಟ್ಟಿರುತ್ತದೆ: ಗಾಜಿನ ಸಮುದ್ರವು **ಬೆಂಕಿ ಬೆರೆತ**ದ್ದು ಆಗಿದೆ. ಈ ದೃಶ್ಯವು ಅಕ್ಷರಶಃ ಆಗಿರಲಾರದು ಎಂದು ಹೇಳಬೇಕಾದ ಅಗತ್ಯವೇ ಇರುವದಿಲ್ಲ: ಸಮುದ್ರದ ನೀರಾದರೂ ಬೆಂಕಿಯನ್ನು ನಂದಿಸುವದು, ಅಥವಾ ಬೆಂಕಿಯು ಸಮುದ್ರವನ್ನು ಆವಿಯಾಗಿಸುವದು. ಬೆಂಕಿಯು ಬಹುಶಃ ಜಯಶಾಲಿಯು ಹಾದು ಬಂದಿದ್ದ "ಪುಟಕ್ಕೆ ಹಾಕಲ್ಪಡುವಿಕೆ"ಯನ್ನು ಸೂಚಿಸಬಹುದಾಗಿದೆ (1 ಪೇತ್ರ 4:12), ಅಥವಾ ಅದು ಸ್ವಲ್ಪ ಹೊತ್ತಿನಲ್ಲಿ ಸುರಿಸಲ್ಪಡಲಿದ್ದ ದೇವರ ಕೋಪಾಗ್ನಿಯನ್ನು ಸೂಚಿಸುತ್ತಿರಬಹುದು (ನೋಡಿರಿ ಪ್ರಕಟನೆ 16:8,

೨). ಈ ಅಧ್ಯಾಯದಲ್ಲಿ ವಿಮೋಚನಕಾಂಡದ ಭಾಷೆಯು ಬಹಳ ವ್ಯಾಪಕವಾಗಿದೆಯಾದ್ದರಿಂದ, ಬೆಂಕಿ ಬೆರೆತ ಗಾಜಿನ ಸಮುದ್ರವು ಒಂದು ಆತ್ಮೀಕ ಕೆಂಪು ಸಮುದ್ರಕ್ಕೆ ಸೂಚನೆಯಾಗಿರುತ್ತದೆಂದು ಕೆಲವರು ನಂಬುತ್ತಾರೆ. ಖಂಡಿತವಾಗಿಯೂ, ಬೆಂಕಿಗೆ ಯಾವದೇ ಸಾಂಕೇತಿಕ ಮಹತ್ವವೂ ಇಲ್ಲದಿರಬಹುದಾದ, ಮತ್ತು ಇದು ಕೇವಲ ದೃಶ್ಯವನ್ನು ಮೆರುಗುಗೊಳಿಸಲಷ್ಟೇ ಸೇರಿಸಿರಬಹುದಾದ ಸಾಧ್ಯತೆ ಇರುತ್ತದೆ. ಕೆಲವರು ಇಲ್ಲಿ ಸೂರ್ಯಾಸ್ತಮದ ವೇಳೆ ಒಂದು ಸಮುದ್ರವು ಕಾಣಿಸಿಕೊಳ್ಳುವ ನೋಟವೆಂದು ಭಾವಿಸುತ್ತಾರೆ. ಇನ್ನು ಕೆಲವರು ಬಂಡೆಯಲ್ಲಿ ಕೆಂಪಾದ ಬೆಳಕನ್ನು ಹೊರಸೂಸುವ ಒಂದು "ಅಗ್ನಿ" ಭರಿತ ಕ್ಷಿರಸ್ಫಟಿಕವನ್ನು ಜ್ಞಾಪಿಸಿಕೊಳ್ಳುತ್ತಾರೆ.

ಯೋಹಾನನು ಕಂಡ ವ್ಯಕ್ತಿಗಳು **ಗಾಜಿನ ಸಮುದ್ರ ಮೇಲೆ ನಿಂತು** ಇದ್ದರು. NIVಯಲ್ಲಿ "ಸಮುದ್ರದ *ಬಳಿಯಲ್ಲಿ* ನಿಂತಿದ್ದರು" ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಗ್ರೀಕ್ ಉಪಸರ್ಗವಾದ ἐπὶ (*epi*), "ಮೇಲೆ" (NASB) ಅಥವಾ "ಬಳಿಯಲ್ಲಿ" (NIV) ಎಂದು ಅನುವಾದಿಸಲ್ಪಟ್ಟಿದ್ದು, ಅದು ಸಾಮಾನ್ಯವಾಗಿ "ಮೇಲೆ" ಅಥವಾ "ಮೇಲ್ಗಡೆ" ಎಂದು ಅರ್ಥವನ್ನು ಕೊಡುತ್ತದೆ, ಇಸ್ರಾಯೇಲ್ಯರು ಕೆಂಪು ಸಮುದ್ರದ ಪೂರ್ವದ ಭಾಗದಲ್ಲಿ ಜಯಶಾಲಿಗಳಾಗಿ ನಿಂತಿರುವದರೊಂದಿಗೆ ಒಂದು ಸಮಾನಾರ್ಥ ಇರುತ್ತದೆ. NASBಯಲ್ಲಿರುವ "ಮೇಲೆ" ಎಂಬುದನ್ನು ಉಳಿಸಿಕೊಳ್ಳುವದಾದರೆ, ವಾಕ್ಯಭಾಗವು ಸಮುದ್ರದ ಅಡೆತಡೆಯು ಅವರನ್ನು ಎದೆಗುಂದಿಸಿರಲಿಲ್ಲ ಎಂಬುದನ್ನು ಸೂಚಿಸಬಹುದಾಗಿದೆ; ಅವರು ದೇವರ ಪರಿಶುದ್ಧ ಸನ್ನಿಧಿಯೊಳಗೆ ಜಯಶಾಲಿಗಳಾಗಿ ಬರುತ್ತಲಿದ್ದರು. ವಾಕ್ಯವು "ಮೇಲೆ" ಎಂಬುದರ ಕಡೆಗೆ ಒಲವು ತೋರುತ್ತದೆ; ಸನ್ನಿವೇಶವು "ಬಳಿಯಲ್ಲಿ" ಎಂಬುದಕ್ಕೆ ಒಲವು ತೋರುತ್ತದೆ. ಎರಡರಲ್ಲಿ ಯಾವದಾದರೂ ಸರಿಯಿರಬಲ್ಲದು ಮತ್ತು ಬೇರೆ ಯಾವ ವಾಕ್ಯಭಾಗವನ್ನೂ ಉಲ್ಲಂಘಿಸುವದಿಲ್ಲ.

ಬಹಳ ಪ್ರಾಮುಖ್ಯವಾದ ವಿವರವು ಸಮುದ್ರದ ಮೇಲೆ ಅಥವಾ ಬದಿಯಲ್ಲಿ ಯಾರು ನಿಂತಿದ್ದರು ಎಂಬುದೆ: **ಮೃಗದ ವಿಗ್ರಹಕ್ಕೆ ನಮಸ್ಕರಿಸದೆಯೂ ಅದರ ಹೆಸರಿನ ಅಂಕೆಯನ್ನು ಮುದ್ರೆಹಾಕಿಸಿಕೊಳ್ಳದೆಯೂ ಅದರ ಮೇಲೆ ಜಯ ಹೊಂದಿದವರು. ಅದರ ಹೆಸರಿನ ಅಂಕೆಯನ್ನು** ಎಂಬುದು (13:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ಮೃಗವನ್ನು ಹಿಂಬಾಲಿಸುವವರಿಗೆ ಕ್ರಯವಿಕ್ರಯವನ್ನು ಮಾಡುವದಕ್ಕೆ ಅವಕಾಶವನ್ನು ಒದಗಿಸಿದ "ಗುರುತು" ಆಗಿತ್ತು (13:16, 17). ಮೃಗವು ಅವರ ವಿರುದ್ಧ ಕೋಪದಿಂದ ಇತ್ತು, ಮೃಗವನ್ನು ನಮಸ್ಕರಿಸುವಂತೆ ಅವರ ಮೇಲೆ ಒತ್ತಡವು ಹೇರಲ್ಪಟ್ಟಿತ್ತು, ಆರ್ಥಿಕ ನಿರ್ಬಂಧಗಳನ್ನು ಹಾಕಲಾಗಿತ್ತು, ಆದರೆ ಅವರು ಸಾಯಬೇಕಾದರೂ ನಂಬಿಗಸ್ತರಾಗಿ ಉಳಿದಿದ್ದರು. 15ನೇ ಅಧ್ಯಾಯದಲ್ಲಿನ ಪರಲೋಕದ ಆರಾಧಕರ ದರ್ಶನವು ಕೇವಲ ರಕ್ತಸಾಕ್ಷಿಗಳಾಗಿ ಸತ್ತವರನ್ನಷ್ಟೇ ಚಿತ್ರಿಸುವದಿಲ್ಲ, ಆದರೆ ಮರಣದ ವರೆಗೂ ನಂಬಿಗಸ್ತರಾಗಿದ್ದ (2:10) *ಎಲ್ಲರನ್ನು* ಸೂಚಿಸುತ್ತದೆ ಎಂಬುದನ್ನು ಮತ್ತೊಮ್ಮೆ ಒತ್ತಿ ಹೇಳಲಾಗುತ್ತದೆ. ಹೀಗೆ ಅವರು ಜಯಶಾಲಿಗಳಾಗಿ ನಿಂತರು. ಆದಿ ಸಭೆಯಲ್ಲಿ ರಕ್ತಸಾಕ್ಷಿಗಳ ಕುರಿತ ಒಂದು ದಾಖಲೆಯು ಹೀಗೆ ಹೇಳುತ್ತದೆ, "ಅವರ ಜಯದ ದಿನವು ಪ್ರಕಾಶಿಸಿತು, ಮತ್ತು ಸೆರೆಮನೆಯಿಂದ ವರ್ತುಲ ಕ್ರೀಡಾಂಗಣದೊಳಗೆ ಸಾಗುತ್ತಾರೆ, ಒಂದು ಸಂಭ್ರಮವುಳ್ಳ ಮತ್ತು ಪ್ರಕಾಶಮಾನದ ಮುಖಭಾವಗಳ ಕಡೆಗೆ ಸಾಗುತ್ತಾರೆ."[5]

ಜಯಶಾಲಿಗಳು ಕೈಗಳಲ್ಲಿ **ದೇವರ ಸೇವಾರ್ಥವಾದ ವೀಣೆಗಳನ್ನು** ಹಿಡಿದುಕೊಂಡಿದ್ದರು. ವೀಣೆಯ ಸಾಂಕೇತಿಕತೆಯು ಈ ಮುಂದೆ ಪುಸ್ತಕದಲ್ಲಿ ಎರಡು ಸಾರಿ ಕಾಣಿಸಿಕೊಂಡಿರುತ್ತದೆ

(5:8; 14:2); ಇದು ಮೂರನೆಯ ಹಾಗೂ ಕೊನೆಯ ಸಾರಿ ಆಗಿರುತ್ತದೆ. ಈ ಹೊತ್ತಿಗಾಗಲೇ, ಇವುಗಳು ಅಕ್ಷರಶಃ ವೀಣೆಗಳಲ್ಲ ಎಂಬುದು ನಮಗೆ ತಿಳಿದಿರತಕ್ಕದ್ದು (5:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಪ್ರಕರಣದಲ್ಲಿ, ಅವರು ವೀಣೆಗಳನ್ನು *ಹಿಡಿದುಕೊಂಡು* ಇದ್ದರು ಎಂಬುದನ್ನು ಗಮನಿಸಿರಿ, ಆದರೆ ಅವರು ವೀಣೆಗಳನ್ನು ನುಡಿಸುತ್ತಿದ್ದರೆಂಬುದು ತಿಳಿಸಲ್ಪಟ್ಟಿಲ್ಲ. ಬದಲಾಗಿ, ಅವರು *ಹಾಡಿದರು*. Albertus Pietersನು ಬರೆದ ಪ್ರಕಾರ, 15 ಮತ್ತು 16 ಅಧ್ಯಾಯಗಳಲ್ಲಿ "ಅಕ್ಷರಶಃವಾದ"ವು "ನಿರೀಕ್ಷೆರಹಿತ": "ಒಬ್ಬನು ಹೇಗೆ ದೇವರ ಕೋಪವನ್ನು ಪಾತ್ರೆಯೊಂದರಲ್ಲಿ ಹಾಕಿ ಅದನ್ನು ಸೂರ್ಯನ ಮೇಲೆ ಸುರಿಯಲು ಸಾಧ್ಯವಿರುತ್ತದೆ?"[6] George Laddನು ಒತ್ತಿ ಹೇಳಿದ್ದೇನೆಂದರೆ ವೀಣೆಗಳು "ದೇವರಿಗೆ ಮಾಡುವ ಸ್ತುತಿ ಹಾಗೂ ಆರಾಧನೆಯ ವ್ಯಕ್ತಪಡಿಸುವಿಕೆಗಳಾಗಿವೆ."[7] Ray Summersನು ವೀಣೆಗಳು "ಸ್ತುತಿಯ ಸಂಕೇತ"[8] ಎಂದು ಹೇಳುತ್ತಾನೆ. Alfred Plummerನು ಅವುಗಳನ್ನು "ಪರಲೋಕದ ಗಾನಗಳ"[9] ಸಂಕೇತ ಎಂದು ಬಣ್ಣಿಸುತ್ತಾನೆ.

**ವಚನಗಳು 3, 4.** 3ನೇ ವಚನವು ಜಯಶಾಲಿಯಾದವರ ಗುಂಪು ಹಾಡುತ್ತಿದ್ದ ಪರಲೋಕದ ಗಾನದ ಹೆಸರನ್ನು ತಿಳಿಸುತ್ತದೆ: **ದೇವರ ದಾಸನಾದ ಮೋಶೆಯ ಹಾಡನ್ನೂ ಯಜ್ಞದ ಕುರಿಯಾದಾತನ ಹಾಡನ್ನೂ ಹಾಡುತ್ತಾ** ಇದ್ದರು. ಮೋಶೆಯು ಅನೇಕ ಸಾರಿ ದೇವರ ಸೇವಕನೆಂದು ಕರೆಯಲ್ಪಟ್ಟಿರುತ್ತಾನೆ (ವಿಮೋಚನಕಾಂಡ 14:31; ಯೆಹೋಶುವ 14:7; 1 ಪೂರ್ವಕಾಲವೃತ್ತಾಂತ 6:49; ದಾನಿಯೇಲ 9:11). Laddನು ಈ ವಿಷಯವನ್ನು ಗಮನಕ್ಕೆ ತರುತ್ತಾನೆ:

> ವ್ಯಾಕರಣಾತ್ಮಕವಾಗಿ ಭಾಷೆಯು ಎರಡು ಹಾಡುಗಳೆಂದು ಸೂಚಿಸುವಂತೆ ಕಾಣಿಸುತ್ತದೆ: ಒಂದು ಮೋಶೆಯ ಹಾಡು, ಮತ್ತು ಇನ್ನೊಂದು ಯಜ್ಞದ ಕುರಿಯಾದಾತನ ಹಾಡು. ಸಂದರ್ಭೋಚಿತವಾಗಿ ಇಲ್ಲಿ ಜಯಶಾಲಿಗಳು ಹಳೆಯ ಹಾಗೂ ಹೊಸ ಎರಡೂ ಒಡಂಬಡಿಕೆಗಳಲ್ಲಿನ ದೇವಜನರಿಗೆ ಹಾಡುವದಕ್ಕೆ ಗೊತ್ತಿರುವಂಥ ಜಯದ ಗೀತೆಯೊಂದನ್ನು ಹಾಡಿದರು ಎಂಬ ವಿಚಾರವು ಇರುತ್ತದೆ, ಯಾಕೆಂದರೆ ಇಬ್ಬರೂ ಒಬ್ಬ ದೇವರಿಂದಾದ ವಿಮೋಚನೆಗಳ ಕುರಿತಾಗಿ ಹಾಡಿದರು.[10]

ಮೂಲ "ಮೋಶೆಯ ಹಾಡು" ಕೆಂಪು ಸಮುದ್ರ ಪೂರ್ವದಿಕ್ಕಿನ ದಡಕ್ಕೆ ಸುರಕ್ಷಿತವಾಗಿ ಸೇರಿದ ಬಳಿಕ ಇಸ್ರಾಯೇಲ್ಯರು ಹಾಡಿದ ಗೀತೆಯಾಗಿರುತ್ತದೆ:

> ಯೆಹೋವನು ಐಗುಪ್ತ್ಯರಲ್ಲಿ ಮಾಡಿದ ಈ ಪರಾಕ್ರಮಕಾರ್ಯವನ್ನು ಇಸ್ರಾಯೇಲ್ಯರು ನೋಡಿ ಯೆಹೋವನಿಗೆ ಭಯಪಟ್ಟು ಆತನಲ್ಲಿಯೂ ಆತನ ಸೇವಕನಾದ ಮೋಶೆಯಲ್ಲಿಯೂ ನಂಬಿಕೆಯಿಟ್ಟರು. ಆಗ ಮೋಶೆಯೂ ಇಸ್ರಾಯೇಲ್ಯರೂ ಯೆಹೋವನ ಸ್ತೋತ್ರಕ್ಕಾಗಿ ಈ ಕೀರ್ತನೆಯನ್ನು ಹಾಡಿದರು -
>
> ಯೆಹೋವನ ಸ್ತೋತ್ರವನ್ನು ಗಾನ ಮಾಡೋಣ;
> ಆತನು ಮಹಾ ಜಯಶಾಲಿಯಾದನು;
> ಕುದುರೆಗಳನ್ನೂ ರಾಹುತರನ್ನೂ ಸಮುದ್ರದಲ್ಲಿ ಕೆಡವಿ ನಾಶ ಮಾಡಿದ್ದಾನೆ.
> ನನ್ನ ಬಲವೂ ಕೀರ್ತನೆಯೂ ಯಾಹುವೇ, ಆತನಿಂದ ನನಗೆ ರಕ್ಷಣೆಯುಂಟಾಯಿತು.
> ನಮ್ಮ ದೇವರು ಆತನೇ, ಆತನನ್ನು ವರ್ಣಿಸುವೆವು;
> ನಮ್ಮ ಪಿತೃಗಳ ದೇವರು ಆತನೇ, ಆತನ ಮಹಿಮೆಯನ್ನು ಪ್ರಖ್ಯಾತಿಪಡಿಸುವೆವು ...
> ನೀನು ಬಿಡುಗಡೆ ಮಾಡಿದ ಪ್ರಜೆಯನ್ನೋ ಪ್ರೀತಿಯಿಂದ ನಡಿಸಿಕೊಂಡು

ನಿನ್ನ ಪರಿಶುದ್ಧ ನಿವಾಸಸ್ಥಾನದ ತನಕ ನಿನ್ನ ಶಕ್ತಿಯಿಂದ ಬರಮಾಡಿದಿ
(ವಿಮೋಚನಕಾಂಡ 14:31-15:2, 13).

"ಈ ಹಾಡು ... ಸಬ್ಬತ್ ದಿನ ಸಂಜೆಗಳಲ್ಲಿ ಸಭಾಮಂದಿರದ ಆರಾಧನೆಯ ವೇಳೆ ಹಾಡಲಾಗುತ್ತಿತ್ತು. ಇದರ ಚಿತ್ರಣವು ಭಕ್ತಿ ವೈರಾಗ್ಯವುಳ್ಳ ಪ್ರತಿಯೊಬ್ಬ ಯೆಹೂದ್ಯನ ಮನಸ್ಸಾಕ್ಷಿಯ ಮೇಲೆ ಅಚ್ಚು ಒತ್ತಲ್ಪಟ್ಟಿತ್ತು."[11] ಮೋಶೆ ಇನ್ನು ಬೇರೆ ಹಾಡುಗಳನ್ನು ಸಹ ಬರೆದಿದ್ದು ಅವುಗಳು ಪ್ರಕಟನೆ 15:3, 4; ಧರ್ಮೋಪದೇಶಕಾಂಡ 32; 33; ಮತ್ತು ಕೀರ್ತನೆ ೯೦ರ ಪರಿಭಾಷೆಯಲ್ಲಿ ಪ್ರತಿಫಲನಗೊಳ್ಳಬಹುದಾಗಿದೆ. ಇವುಗಳು ಮಾತ್ರವಲ್ಲದೆ, ಪ್ರೇರಿತವಲ್ಲದ ಯೆಹೂದಿ ಸಂಪ್ರದಾಯದ ಪ್ರಕಾರ, ಮೋಶೆಯು ಕೀರ್ತನೆಗಳೊಳಗೆ 91-100ರ ವರೆಗೆ ಬರೆದಿರುತ್ತಾನೆ.

ಮೋಶೆಯ ಹಾಗೂ ಯಜ್ಞದ ಕುರಿಯಾದಾತನ ಹೆಸರುಗಳು 15:3ರಲ್ಲಿನ ಜಯದ ಗೀತೆಯೊಂದಿಗೆ ಸೇರಿಸಲ್ಪಟ್ಟಿರುತ್ತವೆ ಯಾಕೆಂದರೆ ಇವರಿಬ್ಬರೂ ದೇವರ ಜನರನ್ನು ಸುರಕ್ಷತೆಯ ಕಡೆಗೆ ನಡಿಸಿದವರಾಗಿದ್ದಾರೆ. ರಬ್ಬಿಗಳು ಮೋಶೆಯನ್ನು ಹಾಗೂ ಮೆಸ್ಸೀಯನನ್ನು "ಮೊದಲ ವಿಮೋಷಕನು ಹಾಗೂ ಕಡೇ ವಿಮೋಚಕನು"[12] ಎಂದು ಕರೆಯುತ್ತಾರೆ. ಫರೋಹನಿಂದ ದೂರವಾಗಿ ಸುರಕ್ಷಿತವಾಗಿದ್ದವರು ಹೇಗೆ ಜಯದ ಗೀತೆಯನ್ನು ಹಾಡಿದರೋ, ಹಾಗೆಯೇ, ಕೈಸರನಿಂದ ಸುರಕ್ಷಿತವಾಗಿ ಕಾಪಾಡಲ್ಪಟ್ಟವರು ಜಯದ ಗೀತೆಯನ್ನು ಹಾಡಿದರು: ಭೂಮಿಯ ಮೇಲೆ, ಅವರಿಗೆ ಗೊಂದಲವಿತ್ತು; ಈಗ ಅವರು ಪ್ರಶಾಂತತೆಯನ್ನು ಹೊಂದಿದ್ದಾರೆ. ಭೂಮಿಯ ಮೇಲೆ, ಅವರಿಗೆ ದುರಂತವು ಇತ್ತು; ಈಗ ಅವರಿಗೆ ಜಯವು ಇರುತ್ತದೆ. ಭೂಮಿಯ ಮೇಲೆ, ಅವರಿಗೆ ನಿಟ್ಟುಸಿರು ಇತ್ತು; ಈಗ ಅವರಿಗೆ ಒಂದು ಹಾಡು ಇರುತ್ತದೆ.[13]

ಅವರ ಜಯದ ಹಾಡಿನಲ್ಲಿರುವ ಅತ್ಯಂಥ ಮಹತ್ವಪೂರ್ಣ ಗುಣಸ್ವಭಾವವೆಂದರೆ ಅದು ಸಂಪೂರ್ಣವಾಗಿ ಕರ್ತನ ಮೇಲೆಯೇ ಮುಖ್ಯವಾದ ಗಮನವನ್ನು ಹೊಂದಿರುತ್ತದೆ. ಅವರು ತಾವು ಬದುಕಿ ಬಂದಿದ್ದ ಸಮಸ್ಯೆಗಳ ಕುರಿತಾಗಿ ಹಾಡಲಿಲ್ಲ, ಆದರೆ ದೇವರು ತೋರ್ಪಡಿಸಿದ್ದ ಶಕ್ತಿಯ ಕುರಿತಾಗಿ ಹಾಡಿದರು; ತಾವು ಸಾಧಿಸಿದ್ದ ಸಂಗತಿಗಳ ಬಗ್ಗೆ ಅಲ್ಲ, ಆದರೆ ಕರ್ತನು ಏನು ಸಾಧಿಸಿದನೆಂಬುದರ ಕುರಿತು ಹಾಡಿದರು. ಹಾಡಿನಲ್ಲಿ ಉತ್ತಮಪುರುಷ ಸರ್ವನಾಮಗಳು ಕಾಣಿಸಿಕೊಳ್ಳುವದಿಲ್ಲ ("ನಾವು," "ನಮಗೆ," "ನಮ್ಮ") - ಕೇವಲ ದೇವರನ್ನು ಸೂಚಿಸುವ ಮಧ್ಯಪುರುಷ ಸರ್ವನಾಮಗಳು ಕಾಣಿಸಿಕೊಳ್ಳುತ್ತವೆ ("ನಿನ್ನ," "ನೀನು"):

**ದೇವರಾದ ಕರ್ತನೇ, ಸರ್ವಶಕ್ತನೇ,**
**ನಿನ್ನ ಕೃತ್ಯಗಳು ಮಹತ್ತಾದವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ;**
**ಸರ್ವಜನಾಂಗಗಳ ಅರಸನೇ, ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ;**
**4ಕರ್ತನೇ, ನಿನ್ನ ನಾಮಕ್ಕೆ ಭಯಪಡದವರೂ ಅದನ್ನು ಘನವಾದದ್ದೆಂದು**
**ಒಪ್ಪಿಕೊಳ್ಳದವರೂ ಯಾರಾದರೂ ಇದ್ದಾರೇ?**
**ನೀನೊಬ್ಬನೇ ಪರಿಶುದ್ಧನು;**
**ನಿನ್ನ ನೀತಿಯುಳ್ಳ ಕೃತ್ಯಗಳು ಪ್ರಕಾಶಕ್ಕೆ ಬಂದದರಿಂದ**
**ಎಲ್ಲಾ ಜನಾಂಗಗಳು ಬಂದು ನಿನ್ನ**
**ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು.**

ಈ ಹಾಡು ಕೀರ್ತನೆಗಳಲ್ಲಿರುವ ಹಾಡುಗಳ ರೀತಿಯಲ್ಲಿಯೇ ಇರುತ್ತದೆ. ಮೊದಲ ನಾಲ್ಕು

ಸಾಲುಗಳು "ಸಮಾನಾರ್ಥದ ಸಮಾಂತರತೆ" ಎಂದು ಕರೆಯುವ ಒಂದು ನಮೂನೆಯನ್ನು ಬಳಸುತ್ತವೆ: ಒಂದು ಹಾಗೂ ಮೂರನೆಯ ಸಾಲುಗಳು ಮುಖ್ಯವಾಗಿ ಸಮಾನಾರ್ಥಕವಾಗಿರುತ್ತದೆ, ಅದೇ ರೀತಿ ಎರಡನೆಯ ಹಾಗೂ ನಾಲ್ಕನೆಯ ಸಾಲುಗಳು ಸಹ ಇರುತ್ತವೆ. ಹಾಡು ಕೀರ್ತನೆಗಳಿಂದ ಬಹಳವಾಗಿ ಎರವಲು ಸಹ ಪಡೆದುಕೊಳ್ಳುತ್ತದೆ:

ಮೊದಲನೆಯ ಹಾಗೂ ಎರಡನೆಯ ಸಾಲುಗಳು (ಕೀರ್ತನೆ 92:5; 98:1; 111:2; 139:14)
ಮೂರನೆಯ ಹಾಗೂ ನಾಲ್ಕನೆಯ ಸಾಲುಗಳು (ಕೀರ್ತನೆ 145:17)
ಐದನೆಯ ಸಾಲು (ಕೀರ್ತನೆ 86:9)
ಆರನೆಯ ಸಾಲು (1 ಸಮುವೇಲ 2:2; ಕೀರ್ತನೆ 99:3; 111:9)
ಏಳನೆಯ ಸಾಲು (ಕೀರ್ತನೆ 86:9).
ಎಂಟನೆಯ ಸಾಲು (ಕೀರ್ತನೆ 98:2).

"ಹಾಡು ಹಳೆಯ ಒಡಂಬಡಿಕೆಯಲ್ಲಿರುವ ಅನೇಕ ಭಾಗಗಳಿಂದ ಆರಿಸಿಕೊಳ್ಳಲ್ಪಟ್ಟಿರುವ ಉಲ್ಲೇಖಗಳು [ಸಂಗ್ರಹಣೆ] ಆಗಿರುತ್ತದೆ, ಆದರೆ ಕ್ರೈಸ್ತ ಆಶಾವಾದದ ಒಂದು ಸಂಭ್ರಮದ ಗೀತೆಯಾಗುವಂತೆ ಅವುಗಳನ್ನೆಲ್ಲಾ ಒಟ್ಟಾಗಿ ಕೂಡಿಸಿರುತ್ತಾನೆ."[14]

George Laddನು ಇದನ್ನು "ಇಡೀ ಬೈಬಲ್ ಸಾಹಿತ್ಯದಲ್ಲಿಯೇ ನಂಬಿಕೆಯ ಕುರಿತಾದ ಅತ್ಯಂಥ ಹೃದಯಸ್ಪರ್ಶಿ ವ್ಯಕ್ತಪಡಿಸುವಿಕೆಗಳಲ್ಲೊಂದಾಗಿದೆ"[15] ಎಂದು ಕರೆದನು. ಈ ಸಂಕೀರ್ತನೆಯು ಮೂರು ಮನವರಿಕೆಗಳನ್ನು ವ್ಯಕ್ತಪಡಿಸಿತು. ದೇವರು ಗತಕಾಲದಲ್ಲಿ ಮಾಡಿರುವ ಕಾರ್ಯದ ವಿಷಯವಾಗಿ ನಂಬಿಕೆಯನ್ನು ವ್ಯಕ್ತಪಡಿಸಿತು (ವ. 3). ಅದು ಈಗ ಸದ್ಯದಲ್ಲಿ ದೇವರು ಮಾಡುತ್ತಿರುವ ಕಾರ್ಯದ ಕುರಿತು ದೃಢವಿಶ್ವಾಸವನ್ನು ವ್ಯಕ್ತಪಡಿಸಿತು (ವ. 3). ದೇವರು ಭವಿಷ್ಯದಲ್ಲಿ ಮಾಡಲಿರುವ ಕಾರ್ಯದ ವಿಷಯವಾಗಿ ನಿರೀಕ್ಷೆಯನ್ನು ವ್ಯಕ್ತಪಡಿಸಿತು (ವ. 4).

**ಸರ್ವಶಕ್ತನು** ಎಂಬ ಗುಣಲಕ್ಷಣವು ಪ್ರಕಟನೆ ಪುಸ್ತಕದಲ್ಲಿ ದೇವರಿಗೆ ಒಂಭತ್ತು ಸಾರಿ ಅನ್ವಯಿಸಲ್ಪಟ್ಟಿದೆ, ಆದರೆ ಹೊಸ ಒಡಂಬಡಿಕೆಯೊಳಗೆ ಬೇರೆ ಪುಸ್ತಕದಲ್ಲಿ ಒಂದೇ ಒಂದು ಸಾರಿ ಮಾತ್ರವೇ ಅನ್ವಯಗೊಳಿಸಲ್ಪಟ್ಟಿದೆ (2 ಕೊರಿಂಥ 6:18). ರೋಮನ್ ಸಾಮ್ರಾಜ್ಯದ ಶಕ್ತಿ ಹಾಗೂ ಪರಾಕ್ರಮಗಳನ್ನು ಎದುರಿಸುತ್ತಿದ್ದವರಾಗಿ, ಕ್ರೈಸ್ತರಿಗೆ ಸರ್ವಶಕ್ತನಾಗಿರುವ ಕರ್ತನ ಕುರಿತು ಜ್ಞಾಪಕಪಡಿಸುವದು ಅಗತ್ಯವಾಗಿತ್ತು. **ಸರ್ವಜನಾಂಗಗಳ ಅರಸನೇ** (ἐθνῶν, *ethnōn*) ಎಂಬ ಪದಗುಚ್ಛದಲ್ಲಿ ಗ್ರಂಥಪಾಠದ ಸಮಸ್ಯೆಯಿರುತ್ತದೆ. KJV ಯಲ್ಲಿ "ದೇವಜನರ ಅರಸೇ" (ἁγίων, *hagiōn*) ಎಂದು ಇರುತ್ತದೆ. NIVಯಲ್ಲಿ "ಯುಗಗಳ ಅರಸೇ" (αἰώνων, *aiōnōn*) ಎಂದಿರುತ್ತದೆ. ಭಿನ್ನತೆಗಳು ಅಮುಖ್ಯವಾದವುಗಳು; ದೇವರು *ಎಲ್ಲರ* ಅರಸಾಗಿದ್ದಾನಷ್ಟೆ.

**ನೀನೊಬ್ಬನೇ ಪರಿಶುದ್ಧನು** ಎಂಬ ಪದಗುಚ್ಛವನ್ನು ಗಮನಿಸಿರಿ. ದೇವರ ಪರಿಶುದ್ಧತೆಯು ಆತನ ನ್ಯಾಯಕ್ಕೆ ನಿಕಟವಾದ ಸಂಬಂಧವನ್ನು ಹೊಂದಿದೆ:

> ... ಪರಿಶುದ್ಧತೆಯ ದೇವರಾಗಿ, ಆತನು ಪಾಪವನ್ನು ಸಹಿಸುವದಕ್ಕೆ ಸಾಧ್ಯವಿಲ್ಲ (ಯೆಶಾಯ 59:1, 2). ಅದು ಆತನ ಸ್ವಭಾವದ ಭಾಗವಾಗಿದೆ. ಆದದರಿಂದ, ಪಾಪಕ್ಕೆ ದಂಡನೆಯಾಗಬೇಕೆಂಬುದು ದೇವರು ಮಾಡಿದ ಒಂದು ನಿರಂಕುಶವಾದ ಕಟ್ಟಪ್ಪಣೆಯಲ್ಲ, ಆದರೆ ಸಂಪೂರ್ಣ ಪರಿಶುದ್ಧತೆ ಮತ್ತು ಸ್ವತಃ ಪಾಪದ ಸ್ವಭಾವದಿಂದಲೇ ತಾರ್ಕಿಕವಾಗಿ

ಉಂಟಾಗುವ ಫಲಿತವಾಗಿದೆ![16]

**ಕೆಲವರು ಎಲ್ಲಾ ಜನಾಂಗಗಳು ಬಂದು ನಿನ್ನ ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು** ಎಂಬುದನ್ನು ಸಾರ್ವತ್ರಿಕ ರಕ್ಷಣೆಗೆ ಪುರಾವೆಯಾಗಿ ಬಳಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಹೇಗೂ, ಎಲ್ಲರೂ ರಕ್ಷಣೆಯನ್ನು ಹೊಂದುವದಿಲ್ಲ ಎಂಬುದನ್ನು ಬೈಬಲ್ ಸ್ಪಷ್ಟಗೊಳಿಸುತ್ತದೆ (ಮತ್ತಾಯ 7:13, 14). ಪರಿಭಾಷೆಯು ಎಲ್ಲಾ ಜನಾಂಗಗಳಿಗೆ *ಸೇರಿದವರೊಳಗಿಂದ* ಜನರು ಕರ್ತನ ಕಡೆಗೆ ಬರುವರು ಎಂಬುದನ್ನು ಸೂಚಿಸುತ್ತಿರಬಹುದು (ನೋಡಿರಿ ಪ್ರಕಟನೆ 5:9; 7:9). ಕೆಲವು ಸಾರಿ ಬೈಬಲಿನಲ್ಲಿ "ಎಲ್ಲರೂ" ಎಂಬುದನ್ನು ಈ ಅರ್ಥದಲ್ಲಿ ಬಳಸಲಾಗಿರುತ್ತದೆ (ನೋಡಿರಿ ಮತ್ತಾಯ 3:5). ಇನ್ನೊಂದು ಕಡೆಯಲ್ಲಿ, ಇದರರ್ಥವು ನ್ಯಾಯತೀರ್ಪಿನ ದಿನದಲ್ಲಿ ಪ್ರತಿ ಮೊಣಕಾಲುಗಳು ಅಡ್ಡ ಬಿದ್ದು ಪ್ರತಿ ನಾಲಿಗೆಯು "ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ" ಅರಿಕೆ ಮಾಡುವವೆಂದು ಆಗಿರಬಹುದು (ಫಿಲಿಪ್ಪಿ 2:10, 11). ಎರಡರಲ್ಲಿ ಯಾವ ವಿಧದಲ್ಲಿದ್ದರೂ ಸರಿಯೇ, ಅಂತ್ಯದಲ್ಲಿ ದೇವರೇ ಭಯಭಕ್ತಿಯನ್ನು ತೋರಿಸಲ್ಪಡತಕ್ಕವನು - ಹೊರತು ಚಕ್ರವರ್ತಿಯಾಗಲು, ಮತ್ತು ಯಾವನೇ ಆಗಲಿ ಹಾಗೂ ಯಾವದೇ ಆಗಲಿ ಭಯಭಕ್ತಿಗೆ ಯೋಗ್ಯವಲ್ಲ - ಎಂಬುದನ್ನು ಮನುಷ್ಯರು ಒಪ್ಪಿಕೊಳ್ಳುವರೆಂಬುದನ್ನು ಈ ಮಾತುಗಳು ಒತ್ತಿ ಹೇಳುತ್ತವೆ.

## ಪರಲೋಕದಲ್ಲಿನ ಆಲಯವು ತೆರೆಯಲ್ಪಡುವದು (15:5-8)

**[5]ಇದಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿರುವ ದೇವದರ್ಶನಗುಡಾರದ ಪವಿತ್ರಸ್ಥಾನವು ತೆರೆಯಿತು; [6]ಅದರೊಳಗಿಂದ ಏಳು ಉಪದ್ರವಗಳನ್ನು ಕೈಯಲ್ಲಿ ಹಿಡಿದಿರುವ ಆ ಏಳು ಮಂದಿ ದೇವದೂತರು ಬಂದರು; ಅವರು ಪ್ರಕಾಶವೂ ನಿರ್ಮಲವೂ ಆದ ನಾರುಮಡಿಯನ್ನು ಧರಿಸಿಕೊಂಡಿದ್ದರು; ತಮ್ಮ ಎದೆಗಳಿಗೆ ಚಿನ್ನದ ಪಟ್ಟಿಯನ್ನು ಕಟ್ಟಿಕೊಂಡಿದ್ದರು.**
**[7]ನಾಲ್ಕು ಜೀವಿಗಳಲ್ಲಿ ಒಂದು ಈ ಏಳು ಮಂದಿ ದೇವದೂತರಿಗೆ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನಾದ ದೇವರ ರೌದ್ರದಿಂದ ತುಂಬಿದ್ದ ಏಳು ಚಿನ್ನದ ಪಾತ್ರೆಗಳನ್ನು ಕೊಟ್ಟಿತು.**
**[8]ದೇವರ ತೇಜಸ್ಸಾನ್ನಿಧ್ಯದಿಂದಲೂ ಆತನ ಶಕ್ತಿಯಿಂದಲೂ ಉಂಟಾದ ಹೊಗೆಯಿಂದ ಪವಿತ್ರಸ್ಥಾನವು ತುಂಬಿದ ಕಾರಣ ಆ ಏಳು ಮಂದಿ ದೇವದೂತರ ಕೈಯಲ್ಲಿದ್ದ ಏಳು ಉಪದ್ರವಗಳು ತೀರುವ ತನಕ ಆ ಪವಿತ್ರಸ್ಥಾನದೊಳಗೆ ಪ್ರವೇಶಿಸುವದಕ್ಕೆ ಯಾರಿಂದಲೂ ಆಗಲಿಲ್ಲ.**

**ವಚನ 5.** ಈ ವಚನವು 1ನೇ ವಚನದಲ್ಲಿ ಪರಿಚಯಿಸಲ್ಪಟ್ಟ ಚರ್ಚೆಯಾಂಶವನ್ನು ಮುಂದುವರೆಸುತ್ತದೆ. ಯೋಹಾನನು ಹೀಗೆ ಬರೆಯುತ್ತಾನೆ, **ಇದಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿರುವ ದೇವದರ್ಶನಗುಡಾರದ ಪವಿತ್ರಸ್ಥಾನವು ತೆರೆಯಿತು.** ವಿಮೋಚನಕಾಂಡದ ಸಾಂಕೇತಿಕತೆಯನ್ನು ಮುಂದುವರೆಸುತ್ತಾ, ಯೋಹಾನನು ಸೀನಾಯಿ ಪರ್ವತದಲ್ಲಿ ಕಟ್ಟಲ್ಪಟ್ಟಿದ್ದ ದೇವದರ್ಶನಗುಡಾರದ ಪ್ರತಿಕೃತಿಯೊಂದನ್ನು ಕಾಣುತ್ತಾನೆ. ಅರಣ್ಯದಲ್ಲಿದ್ದನ ದೇವದರ್ಶನಗುಡಾರವು "ಸಾಕ್ಷೀ ಗುಡಾರ" ಎಂದು ಕರೆಯಲ್ಪಟ್ಟಿರುತ್ತದೆ (ವಿಮೋಚನಕಾಂಡ 38:21; ಅರಣ್ಯಕಾಂಡ 1:50; ನೋಡಿರಿ ಅರಣ್ಯಕಾಂಡ 9:15; 17:7; 18:2; ಅಪೊಸ್ತಲರ ಕೃತ್ಯಗಳು 7:44) ಯಾಕೆಂದರೆ ಅದರೊಳಗೆ ದಶಾಜ್ಞೆಗಳು ಬರೆಯಲ್ಪಟ್ಟಿದ್ದ ಹಲಗೆಗಳು ಇಡಲ್ಪಟ್ಟಿದ್ದವು. ಆ ಹಲಗೆಗಳು "ದೇವರ ರಾಜಿಮಾಡಿಕೊಳ್ಳದ ಮತ್ತು ನಿಷ್ಠುರವಾದ

ನ್ಯಾಯದ ಕುರಿತಾಗಿ ಸಾಕ್ಷಿ"[17] ಹೇಳುವವುಗಳಾಗಿದ್ದವು.

ಒಂದೇ ಪದಗುಚ್ಛದಲ್ಲಿ **ದೇವದರ್ಶನಗುಡಾರ** ಮತ್ತು **ಪವಿತ್ರಸ್ಥಾನ** ಎಂಬ ಎರಡೂ ಪದಗಳಿರುವದು ಗೊಂದಲವನ್ನುಂಟು ಮಾಡುವದಾಗಿದೆ. ಸಾಮಾನ್ಯವಾಗಿ ನಾವು ದೇವದರ್ಶನಗುಡಾರ ಹಾಗೂ ದೇವಾಲಯಗಳನ್ನು ಎರಡು ಬೇರೆ ಬೇರೆ ಕಟ್ಟಡಗಳಾಗಿವೆ ಎಂದು, ಸೊಲೊಮೋನನ ಕಾಲದಲ್ಲಿ ದೇವದರ್ಶನದ ಬದಲಾಗಿ ದೇವಾಲಯವು ಕಟ್ಟಲ್ಪಟ್ಟಿತು ಎಂದು ಯೋಚಿಸುತ್ತೇವೆ. "ದೇವಾಲಯ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ναός (*naos*) ಎಂದಾಗಿದ್ದು ಅದರರ್ಥವು ದೇವಾಲಯದ ಅಥವಾ ದೇವದರ್ಶನಗುಡಾರದ *ಪವಿತ್ರಸ್ಥಾನ* ಎಂದಾಗಿರುತ್ತದೆ. ಹೀಗಿರುವದರಿಂದ NEBಯಲ್ಲಿ "ಪರಲೋಕದ ಸಾಕ್ಷೀ ಗುಡಾರದ ಪವಿತ್ರಾಲಯ" ಎಂದು ಇರುತ್ತದೆ. ಸನ್ನಿವೇಶದಲ್ಲಿ, *naos* ಎಂಬುದು ಬಹುಶಃ ದೇವದರ್ಶನಗುಡಾರದಲ್ಲಿರುವ *ಅತಿ ಪರಿಶುದ್ಧ ಸ್ಥಳ*ವನ್ನು ಸೂಚಿಸುತ್ತದೆ, ಅದು ಸಾಕ್ಷೀ ಮಂಜೂಷವನ್ನು ಒಳಗೊಂಡಿದ್ದು ಅದರಲ್ಲಿಯೇ ಕಲ್ಲಿನ ಎರಡು ಹಲಗೆಗಳಿದ್ದವು. ಯೆಹೂದಿ ಯುಗದ ವೇಳೆ, ಅತಿ ಪರಿಶುದ್ಧ ಸ್ಥಳವು ಒಂದು ವಿಶೇಷವಾದ ವಿಧದಲ್ಲಿ ತನ್ನ ಜನರನ್ನು ಸಂಧಿಸುವೆನೆಂದು ದೇವರು ವಾಗ್ದಾನ ಮಾಡಿದ ಸ್ಥಳವಾಗಿತ್ತು.

**ವಚನ 6.** ಪವಿತ್ರಸ್ಥಾನವನ್ನು ತೆರೆಯುವದರ ಉದ್ದೇಶವು ಪರಲೋಕದ ಸಂದೇಶಕರು ಹೊರಗೆ ಬರುವಂತೆ ಅನುಮತಿಸುವದಕ್ಕಾಗಿ ಆಗಿತ್ತು: **ಅದರೊಳಗಿಂದ** "ಪವಿತ್ರಸ್ಥಾನ" (*naos*) **ಏಳು ಉಪದ್ರವಗಳನ್ನು ಕೈಯಲ್ಲಿ ಹಿಡಿದಿರುವ ಆ ಏಳು ಮಂದಿ ದೇವದೂತರು ಬಂದರು.** 11:19ರಲ್ಲಿ ಒಡಂಬಡಿಕೆಯನ್ನು ತೋರಿಸುವದಕ್ಕಾಗಿ ಪವಿತ್ರಾಲಯವು ತೆರೆಯಲ್ಪಟ್ಟಿತು; ಈ ಸಾರಿ, ದೇವದೂತರಿಗೆ ಹೊರಡುವದಕ್ಕೆ ಅವಕಾಶ ನೀಡುವ ಉದ್ದೇಶದಿಂದ ತೆರೆಯಲ್ಪಟ್ಟಿತು. ಆದ್ದರಿಂದ ಅವರು ದೇವರ ಸನ್ನಿಧಿಯೊಳಗಿಂದ ಹೊರಟು ಆತನು ಹೇಳಿದ್ದನ್ನು ಮಾಡುವದಕ್ಕಾಗಿ ಬಂದರು ಎಂಬುದನ್ನು ಒತ್ತಿ ಹೇಳುತ್ತದೆ.

ದೇವದೂತರು **ಪ್ರಕಾಶವೂ ನಿರ್ಮಲವೂ ಆದ ನಾರುಮಡಿಯನ್ನು ಧರಿಸಿಕೊಂಡಿದ್ದರು; ತಮ್ಮ ಎದೆಗಳಿಗೆ ಚಿನ್ನದ ಪಟ್ಟಿಯನ್ನು ಕಟ್ಟಿಕೊಂಡಿದ್ದರು** ಎಂದು ಬಣ್ಣಿಸಲ್ಪಟ್ಟಿದ್ದಾರೆ. ನಿಯಮದ ಪ್ರಕಾರ, ಪ್ರಕಟನೆ ಪುಸ್ತಕವು ದೇವದೂತರ ವೇಷಭೂಷಣದ ಕುರಿತು ವರ್ಣನೆ ಮಾಡುವದಿಲ್ಲ. ಈ ವರ್ಣನೆಯಂತೆ ತೋರುವಂಥದ್ದು ಬಹುಶಃ ಅವರು ದೇವರ ಪ್ರತಿನಿಧಿಗಳೆಂಬುದನ್ನು ಪುನರ್ದೃಢೀಕರಿಸುವದಕ್ಕಾಗಿ ಇರಬಹುದಾಗಿದೆ: ದೇವರು ಪರಿಶುದ್ಧನು ಮತ್ತು *ನಿರ್ಮಲನು*, ಆದ್ದರಿಂದ ಆತನ ಸಂದೇಶಕರು **ಪ್ರಕಾಶವೂ ನಿರ್ಮಲವೂ ಆದ ನಾರುಮಡಿಯನ್ನು** ಧರಿಸಿದ್ದರು. ಈ ಮುಂಚೆ, ಯೇಸುವು ಒಂದು ರಾಜವಂಶದ ನಿಲುವಂಗಿಯನ್ನು ತೊಟ್ಟಿರುವವನಾಗಿ, "ಎದೆಗೆ ಚಿನ್ನದ ಪಟ್ಟಿಯನ್ನು ಕಟ್ಟಿಕೊಂಡವನಾಗಿ" (1:13) ಕಾಣಿಸಿಕೊಂಡನು; ಈ ಏಳು ಮಂದಿ ಅದೇ ರೀತಿಯಲ್ಲಿಯೇ ಉಡುಪು ಧರಿಸಿದ್ದರು. ಕೆಲವರು ಹಾಕಿಕೊಂಡಿರುವ ಬಟ್ಟೆಯು ಯಾಜಕೋದ್ಯೋಗದ ಉಡುಪನ್ನು ಸೂಚಿಸುತ್ತದೆಂದು ನಂಬುತ್ತಾರೆ, ಇದು ಅಸಾಧ್ಯವಾದದ್ದಾಗಿದೆ (1:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 7.** "ಬಿಕ್ಕಟ್ಟು ಎದುರಾದ ಸಂದರ್ಭದಲ್ಲಿ, [ಅಮೆರಿಕದ] ಅಧ್ಯಕ್ಷನು ತನ್ನ ಮಂತ್ರಿಮಂಡಲವನ್ನು ಸಭೆಗೆ ಕರೆಯುವಾಗ ... ಪ್ರತಿಯೊಬ್ಬರು ಮಂತ್ರಿಮಂಡಲದ ಕೋಣೆಯೊಳಗಿಂದ ಹೊರಗೆ ಬರುವ ವೇಳೆ ಅವರನ್ನು ನೋಡುವವರಾಗಿರುತ್ತಾರೆ. ಅವರು ಏನು ಹೇಳುವರು? ಏನು ಸಂಭವಿಸಲಿಕ್ಕಿದೆ?"[18] ಅವರು ದೇವದೂತರ ಉದ್ದೇಶವು ಏನಾಗಿರಬಹುದೆಂದು ಚಕಿತಗೊಳ್ಳುವವರಾಗಿ, ಮೊದಲು ಯೋಹಾನನಿಗೆ ಮತ್ತು ನಂತರ

ಆತನ ವಾಚಕರಿಗೆ ಅದೇ ವಿಧವಾದ ಉದ್ವೇಗದ ಅನುಭವವಾಗಿರಬಹುದಾಗಿದೆ ಅವರು ಬಹಳ ಹೊತ್ತಿನ ಕಾಲ ಊಹಾಪೋಹಗಳನ್ನು ಮಾಡಿಕೊಳ್ಳಬೇಕಾಗಿರಲಿಲ್ಲ. **ನಾಲ್ಕು ಜೀವಿಗಳಲ್ಲಿ ಒಂದು ಈ ಏಳು ಮಂದಿ ದೇವದೂತರಿಗೆ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನಾದ ದೇವರ ರೌದ್ರದಿಂದ ತುಂಬಿದ್ದ ಏಳು ಚಿನ್ನದ ಪಾತ್ರೆಗಳನ್ನು ಕೊಟ್ಟಿತು.**

4ನೇ ಅಧ್ಯಾಯದಲ್ಲಿನ ಸಿಂಹಾಸನದ ದೃಶ್ಯದಲ್ಲಿ **ನಾಲ್ಕು ಜೀವಿಗಳು** "ಸಿಂಹಾಸನದ ಮಧ್ಯದಲ್ಲಿ ಅದರ ನಾಲ್ಕು ಕಡೆಗಳಲ್ಲಿ" ಜೀವಿಸುತ್ತಿದ್ದವು (4:6) – ಸರ್ವಶಕ್ತನ ಸನ್ನಿಧಿಯಲ್ಲಿಯೇ ವಾಸಿಸುತ್ತಿದ್ದರು (4:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅವರ ಕೈಗಳಿಂದ ಪಾತ್ರೆಗಳನ್ನು ತೆಗೆದುಕೊಳ್ಳುವದೆಂದರೆ ವೈಯಕ್ತಿಕವಾಗಿ ದೇವರಿಂದಲೇ ಆದೇಶಿಸಲ್ಪಡುವದಕ್ಕೆ ಸಮಾನವಾಗಿತ್ತು. ನಾಲ್ಕು ಜೀವಿಗಳೊಳಗೆ ಯಾವದು ದೇವದೂತರಿಗೆ ಪಾತ್ರೆಗಳನ್ನು ಕೊಟ್ಟಿತು? ವಾಕ್ಯವು ಅದನ್ನು ತಿಳಿಸುವದಿಲ್ಲ, ಮತ್ತು ಅದು ಪ್ರಾಮುಖ್ಯವೂ ಅಲ್ಲ. ಇದಕ್ಕೆ ಮುಂಚೆ ನಾಲ್ಕು ಜೀವಿಗಳಿಗೂ ನಾಲ್ಕು ಕುದುರೆ ಸವಾರರನ್ನು ಹೊರಗೆ ಕರೆಯುವ ವೇಳೆ ಒಬ್ಬೊಬ್ಬನಿಗೂ ನಾಟಕದಲ್ಲಿ ಮಾತಾಡುವ ಪಾತ್ರವು ಕೊಡಲ್ಪಟ್ಟಿತ್ತು (6:1, 3, 5, 7). ಈಗ ಅವುಗಳಲ್ಲೊಬ್ಬನು ದೇವರ ಸನ್ನಿಧಿಯಿಂದ ರೌದ್ರ ಪಾತ್ರೆಯನ್ನು ತರುವವನಾಗಿ "ಮಾತಿಲ್ಲದ ಪಾತ್ರವನ್ನು" ನಿರ್ವಹಿಸುತ್ತಿದ್ದನು. ಕೆಲವರು ಜೀವಿಗಳ ಮೂಲಕ ಪಾತ್ರೆಗಳು ತರಲ್ಪಡುವದರ ವಿವರಣೆಯಲ್ಲಿ ಒಂದು ಹೆಚ್ಚಿನ ಮಹತ್ವಪೂರ್ಣತೆಯಿರುತ್ತದೆಂದು ಕಾಣುತ್ತಾರೆ. ಕೆಲವರು ಜೀವಿಗಳು ಎಲ್ಲಾ *ಪ್ರಕೃತಿಗೆ* ಸಂಕೇತವಾಗಿರಬಹುದು ಮತ್ತು ಪಾತ್ರೆಗಳಲ್ಲಿ ಹಲವಾರು *ಪ್ರಾಕೃತಿಕ* ವಿಕೋಪಗಳನ್ನು ಬಣ್ಣಿಸುತ್ತವೆ ಎಂಬುದರ ನಡುವೆ ಸಂಬಂಧವಿದೆ ಎಂಬ ಅಭಿಪ್ರಾಯ ಪಡುತ್ತಾರೆ. ಹೇಗೂ, ಜೀವಿಗಳಲ್ಲೊಬ್ಬನು ದೇವರು ಹಾಗೂ ಏಳು ದೇವದೂತರ ನಡುವೆ ಮಧ್ಯವರ್ತಿಯಾಗಿರುವದರಲ್ಲಿ ಬಹುಶಃ ಯಾವದೇ "ಆಳವಾದ" ಮಹತ್ವದ ಅರ್ಥವು ಇಲ್ಲದಿರಬಹುದು.

**ಪಾತ್ರೆಗಳು** ಎಂಬುದನ್ನು ಅನುವಾದಿಸಿರುವ φιάλας (*phialas*, ಇದು φιάλη, *phialē* ಎಂಬದರಿಂದ ಬಂದದ್ದು) ಎಂಬ ಗ್ರೀಕ್ ಪದವು, ದೇವಾಲಯದಲ್ಲಿರುವಂಥ ಪಾತ್ರೆಗಳಿಗೆ ಸಾಮ್ಯತೆಯಿರುವಂಥ ಆಳವಿಲ್ಲದ ಪಾತ್ರೆಗಳನ್ನು ಸೂಚಿಸುತ್ತಿರಬಹುದಾಗಿದೆ, ಅವುಗಳಲ್ಲಿರುವದನ್ನು ಸುಲಭವಾಗಿ ಹೊರ ಚೆಲ್ಲಬಹುದು. KJVಯಲ್ಲಿ "ಸೀಸೆಗಳು" ಎಂದಿರುತ್ತದೆ, ಅವು ಸಾಮಾನ್ಯವಾಗಿ ಚಿಕ್ಕದಾದ, ಕಿರಿದಾದ ಕುತ್ತಿಗೆಯಿರುವ ಪಾತ್ರೆಗಳೆಂದು ಯೋಚಿಸಲಾಗುತ್ತದೆ. ಪ್ರಕಟನೆ ಪುಸ್ತಕದೊಳಗೆ ನಾವು ಚಿನ್ನದ ಪಾತ್ರೆಗಳ ಕುರಿತಾಗಿ ಓದುವ ಇನ್ನು ಒಂದೇ ಒಂದು ಸ್ಥಳವೆಂದರೆ ಅದು ಸಿಂಹಾಸನದ ದೃಶ್ಯದಲ್ಲಿಯೇ, ಅದರಲ್ಲಿ ಇಪ್ಪತ್ತುನಾಲ್ಕು ಹಿರಿಯರ ಕೈಗಳಲ್ಲಿ "ದೇವಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳೂ ಇದ್ದವು" (5:8). ಬಹುಶಃ ವಾಚಕನು ಪುನಃ ಪ್ರಾರ್ಥನೆ ಹಾಗೂ ದೇವರ ಉದ್ದೇಶಗಳ ನೆರವೇರಿಯ ನಡುವಿನ ಸಂಬಂಧವನ್ನು ನೋಡಬೇಕಾಗಿರಬಹುದು.

ಪಾತ್ರೆಗಳು **ದೇವರ ರೌದ್ರದಿಂದ ತುಂಬಿದ್ದವು** (ನೋಡಿರಿ 15:1; 16:1, 19). "ರೌದ್ರ" ಎಂಬ ಪದವು ಗ್ರೀಕ್ ಭಾಷೆಯ θυμός (*thumos*) ಪದದಿಂದ ಅನುವಾದಿಸಲ್ಪಟ್ಟಿದ್ದು, ಅದರರ್ಥವು "ಉದ್ರೇಕಗೊಂಡ ಕೋಪ, ಭಾವೋದ್ರೇಕ,"[19] "ಭಾವಗಳು ಕೆರಳಿಸಲ್ಪಟ್ಟ ಸ್ಥಿತಿ, ಒಳಗಿದ್ದ ರೋಷವು ಸ್ಫೋಟಗೊಂಡು ಹೊರಗೆ ಬರುವದು"[20] ಎಂದಾಗಿದೆ. Vineನು ಹೆಚ್ಚು ಸಾಮಾನ್ಯವಾಗಿರುವ "ಕೋಪ" ὀργή (*orgē*), ಮತ್ತು *thumos* ನಡುವೆ ಒಂದು ವ್ಯತ್ಯಾಸವನ್ನು ಮಾಡುತ್ತಾನೆ, *orgē* ಯನ್ನು "ಮನಸ್ಸಿನ ಹೆಚ್ಚು ಸ್ಥಿರಗೊಂಡಿರುವ ಅಥವಾ

ನೆಲೆಯಾಗಿರುವ ಸ್ಥಿತಿಯಾಗಿದ್ದು, ಸತತವಾಗಿ ಪ್ರತೀಕಾರವನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯೊಂದಿಗೆ ಇರುವದಾಗಿದೆ."[21] *Thumos*ದಲ್ಲಿನ ಪ್ರಾಥಮಿಕ ಉದ್ದೇಶವು ಸೇಡು ತೀರಿಸಿಕೊಳ್ಳುವಿಕೆಯಾಗಿರುವದಿಲ್ಲ.

ಈ ಅಧ್ಯಾಯದಲ್ಲಿ ದೇವರು ಹಾಗೂ ಮೃಗದ ನಡುವೆ ಅನೇಕ ವಿರುದ್ಧ ಹೋಲಿಕೆಗಳನ್ನು ಸೂಚ್ಯಾರ್ಥವಾಗಿ ಹೇಳಲಾಗಿರುತ್ತದೆ. 7ನೇ ವಚನದಲ್ಲಿ ಅಂಥ ಒಂದು ವಿರುದ್ಧ ಹೋಲಿಕೆಯಿರುತ್ತದೆ: ಮೃಗವು ಅಳಿದು ಹೋಗುವದು, ಆದರೆ ದೇವರು **ಯುಗಯುಗಗಳಲ್ಲಿಯೂ ಜೀವಿಸುವಾತ**ನು. ಆದದರಿಂದ, ಭಯಭಕ್ತಿಯನ್ನು ತೋರಿಸಬೇಕಾಗಿದ್ದದ್ದು ದೇವರಿಗೇ ಹೊರತು, ಮೃಗಕ್ಕೆ ಆಗಿರಲಿಲ್ಲ.

**ವಚನ 8.** ಪೂರ್ವಸಿದ್ಧತಾ ದೃಶ್ಯವು ಒಂದು ಅಂತಿಮವಾದ ವಿವರಣೆಯನ್ನೊಳಗೊಂಡಿದೆ, ಅದು ಮಹತ್ವಪೂರ್ಣವಾದದ್ದು: **ದೇವರ ತೇಜಸ್ಸಾನ್ನಿಧ್ಯ ದಿಂದಲೂ ಆತನ ಶಕ್ತಿಯಿಂದಲೂ ಉಂಟಾದ ಹೊಗೆಯಿಂದ ಪವಿತ್ರಸ್ಥಾನವು** [ಅಥವಾ "ದೇವಾಲಯ"] **ತುಂಬಿದ ಕಾರಣ ಆ ಏಳು ಮಂದಿ ದೇವದೂತರ ಕೈಯಲ್ಲಿದ್ದ ಏಳು ಉಪದ್ರವಗಳು ತೀರುವ ತನಕ ಆ ಪವಿತ್ರಸ್ಥಾನದೊಳಗೆ ಪ್ರವೇಶಿಸುವದಕ್ಕೆ ಯಾರಿಂದಲೂ ಆಗಲಿಲ್ಲ.** ಇದೇ ರೀತಿಯ ದೃಶ್ಯವೊಂದು ವಿಮೋಚನಕಾಂಡ 40:34, 35ರಲ್ಲಿ ದಾಖಲಿಸಲ್ಪಟ್ಟಿದೆ, ಅದು ಪ್ರಾಚೀನ ದೇವದರ್ಶನಗುಡಾರವನ್ನು ಕಟ್ಟಿ ಮುಗಿಸಿದ ಬಳಿಕ ನಡೆದ ಘಟನೆಯಾಗಿದೆ:

> ... ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು. ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಯಾಗಿರುವದರಿಂದಲೂ ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವದರಿಂದಲೂ ಮೋಶೆ ಗುಡಾರದಲ್ಲಿ ಹೋಗಲಾರದೆ ಇದ್ದನು.

ದೇವಾಲಯವನ್ನು ಕಟ್ಟಿ ಮುಗಿಸಿದ ಬಳಿಕ ಸಹ ಅದೇ ಸಂಗತಿಯು ಸಂಭವಿಸಿತು (ನೋಡಿರಿ 1 ಅರಸು 8:10, 11; 2 ಪೂರ್ವಕಾಲವೃತ್ತಾಂತ 5:13, 14). ಇದಕ್ಕೆ ಸಂಬಂಧಿಸಿದ ಒಂದು ವಾಕ್ಯಭಾಗವು ಯೆಶಾಯ 6:4 ಆಗಿರುತ್ತದೆ, ಅಲ್ಲಿ ಪ್ರವಾದಿಯು ದೇವರ ಮಹಿಮೆಯಿಂದ ತುಂಬಿದ್ದ ದೇವಾಲಯವನ್ನು ಕಂಡನು.

ಪ್ರಕಟನೆ 15ರಲ್ಲಿನ ದರ್ಶನದಲ್ಲಿ, ದೇವರ ಮಹಿಮೆಯು ಪರಲೋಕದ ದೇವದರ್ಶನಗುಡಾರವನ್ನು ಅದೇ ವಿಧದಲ್ಲಿಯೇ ತುಂಬಿಕೊಂಡಿತು, ಮತ್ತು ರೌದ್ರದ ಪಾತ್ರೆಗಳು ಸುರಿಸಲ್ಪಡುವ ವರೆಗೂ ಯಾರೂ ಒಳಗೆ ಪ್ರವೇಶಿಸುವದಕ್ಕೆ ಸಾಧ್ಯವಾಗಲಿಲ್ಲ. ಪಶ್ಚಾತ್ತಾಪವಿಲ್ಲದವರ ಮೇಲೆ ದೇವರ ನ್ಯಾಯವು ತೀರಿಸಲ್ಪಡುವ ತನಕ, ಯಾವನೂ - ಮಾನವ ಅಥವಾ ದೇವದೂತರಾಗಲಿ - ಆತನ ಸನ್ನಿಧಿಯನ್ನು ಪ್ರವೇಶಿಸಲು ಸಾಧ್ಯವಾಗುವದಿಲ್ಲ. ಕರುಣೆಗಾಗಿ ಇದ್ದ ಸಮಯವು ಗತಿಸಿ ಹೋಗಿತ್ತು, ಸದವಕಾಶದ ದಿನವು ಹೊರಟು ಹೋಗಿತ್ತು, ಮತ್ತು ಕರ್ತನ ರೌದ್ರವನ್ನು ತಡೆಯುವದಕ್ಕೆ ಯಾವದಕ್ಕೂ ಸಾಧ್ಯವಿರಲಿಲ್ಲ.

ರೌದ್ರದ ಪಾತ್ರೆಗಳನ್ನು ಸುರಿಯುವದಕ್ಕಾಗಿ ಮಾಡಿದ ಸಿದ್ಧತೆಯಲ್ಲಿದ್ದ ಹೆಜ್ಜೆಗಳನ್ನು ಗಮನಿಸಿರಿ:

1. ಪರಿಶುದ್ಧ ಸ್ಥಳವು ತೆರೆಯಲ್ಪಟ್ಟಿತು.
2. ದೇವದೂತರಿಗೆ ವಿಶೇಷ ಉಡುಪುಗಳು ಕೊಡಲ್ಪಟ್ಟವು.

3. ದೇವದೂತರು "ಪವಿತ್ರಸ್ಥಾನ" ಹೊರಬಂದರು.
4. ಪಾತ್ರೆಗಳು ಸಿದ್ಧಗೊಳಿಸಲ್ಪಟ್ಟವು.
5. ಒಬ್ಬ ಜೀವಿಯು ಪಾತ್ರೆಗಳನ್ನು ದೇವದೂತರ ಕೈಗಳಿಗೆ ಕೊಟ್ಟನು.
6. ದೇವದರ್ಶನಗುಡಾರದೊಳಗೆ ಹೊಗೆಯು ತುಂಬಿಕೊಂಡಿತು.

ಈ ಪೂರ್ವಸಿದ್ಧತಾ ಹೆಜ್ಜೆಗಳು ಒಂದು ಪ್ರಾಮುಖ್ಯವಾದ ತತ್ವವನ್ನು ದೃಷ್ಟಾಂತಪಡಿಸುವದಕ್ಕಾಗಿ ಒತ್ತಿ ಹೇಳಲ್ಪಟ್ಟಿವೆ: ಎಲ್ಲಾ ಸಮಯಗಳಲ್ಲಿಯೂ, ದೇವರು ಸಂಗತಿಗಳನ್ನು ಸರಿ *ಪಡಿಸುತ್ತಿದ್ದಾನೆ*, ಅಥವಾ ಸಂಗತಿಗಳನ್ನು ಸರಿಪಡಿಸುವದಕ್ಕಾಗಿ *ಸಿದ್ಧತೆಯನ್ನು ಮಾಡುತ್ತಿದ್ದಾನೆ*. ಕೆಲವು ಸಾರಿ, ದೇವರು ಏನನ್ನೂ ಮಾಡುತ್ತಿಲ್ಲವೆಂಬಂತೆ ತೋರುವ ವೇಳೆ, ಆತನು ಏನೋ ಒಂದನ್ನು ಮಾಡುವದಕ್ಕಾಗಿ *ಸಿದ್ಧಗೊಳ್ಳುತ್ತಿದ್ದಾನೆ* ಎಂದರ್ಥ. ಸರಿಯಾದ ಸಮಯವು ಬರುವಾಗ, ಆತನು ಕಾರ್ಯಪ್ರವೃತ್ತನಾಗುವನು - ಮತ್ತು ಅದನ್ನು ಮಾಡುವದಂತೆ ಆತನನ್ನು ತಡೆಯಲು ಯಾವದಕ್ಕೂ ಸಾಧ್ಯವಾಗುವದಿಲ್ಲ.

ನಾವು ದೇವರ ಸಿದ್ಧತೆಯ ಮೇಲೆ ಅವಲಂಭಿತರಾಗಿರಬೇಕು ಮತ್ತು ನಮ್ಮ ನಂಬಿಕೆಯನ್ನು ಹಿಡಿದುಕೊಂಡಿರಬೇಕು. "ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ *ಸಿದ್ಧಮಾಡಿರುವಂಥದೆಲ್ಲವನ್ನು* ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ" (1 ಕೊರಿಂಥ 2:9; ಒತ್ತಿ ಹೇಳಿದ್ದು ನನ್ನದು).

## ಅನ್ವಯಿಸುವಿಕೆ

### ಮೋಶೆಯ ಮತ್ತು ಯಜ್ಞದ ಕುರಿಯಾದಾತನ ಹಾಡು (ಅಧ್ಯಾಯ 15)

ಈ ಪಾಠಕ್ಕೆ ನೀಡಬಹುದಾದ ಅತಿ ಸಾಮಾನ್ಯವಾದ ಶಿರ್ಷಿಕೆ ಎಂದರೆ "ಮೋಶೆಯ ಮತ್ತು ಯಜ್ಞದ ಕುರಿಯಾದಾತನ ಹಾಡು." ಅದೇ ರೀತಿಯ ಶಿರ್ಷಿಕೆಗಳಲ್ಲಿ "ವಿಮೋಚನೆಯ ಗೀತೆ" ಮತ್ತು "ಜಯದ ಗೀತೆ" ಎಂಬವುಗಳು ಸೇರಿರುತ್ತವೆ. G. R. Beasley-Murrayನು "ಕಡೇ ವಿಮೋಚನಾಯಾತ್ರೆ"[22] ಎಂಬ ಶಿರ್ಷಿಕೆಯನ್ನು ಬಳಸುವ ಮೂಲಕ 15ನೇ ಅಧ್ಯಾಯದಲ್ಲಿರುವ ವಿಮೋಚನಕಾಂಡದ ಭಾಷೆಯನ್ನು ಒತ್ತಿ ಹೇಳಿದನು. Ralph Earleನು ಅಧ್ಯಾಯದ ಕುರಿತು ಈ ಸಂಕ್ಷಿಪ್ತ ವಿವರಣೆಯನ್ನು ನೀಡುತ್ತಾನೆ: (1) ಕಾಯುತ್ತಿರುವ ದೇವದೂತರು (ವ. 1); (2) ಜಯಶಾಲಿಗಳಾದ ದೇವಜನರು (ವಚನಗಳು 2-4); (3) ಹೊರ ಬರುವ ದೇವದೂತರು (ವಚನಗಳು 5-8).[23] ಇನ್ನೊಂದು ಸಂಕ್ಷಿಪ್ತ ವಿವರಣೆಯು "ಗಮನವನ್ನು ಕೇಂದ್ರಿಕರಿಸು" ಎಂಬ ಪದವನ್ನು ಬಳಸುತ್ತದೆ: (1) ದೇವರ ಯೋಜನೆಗಳ ಮೇಲೆ ಗಮನವನ್ನು ಕೇಂದ್ರಿಕರಿಸು (ವ. 1); (2) ದೇವರ ಶಕ್ತಿಯ ಮೇಲೆ ಗಮನವನ್ನು ಕೇಂದ್ರಿಕರಿಸು (ವಚನಗಳು 2-4); (3) ದೇವರ ಸಿದ್ಧತೆಯ ಮೇಲೆ ಗಮನವನ್ನು ಕೇಂದ್ರಿಕರಿಸು (ವಚನಗಳು 5-8).

ನೀವು ಪ್ರಕಟನೆ ಪುಸ್ತಕದ ಕುರಿತ ಬೋಧನಾ ಸರಣಿಯನ್ನು ಕ್ಲುಪ್ತಗೊಳಿಸಲು ಬಯಸುವದಾದರೆ, ನೀವು 15 ಮತ್ತು 16 ಅಧ್ಯಾಯಗಳ ಮೇಲೆ ಒಂದು ಪಾಠವನ್ನು ಉಪದೇಶಿಸಬಹುದು ಅಥವಾ ಬೋಧಿಸಬಹುದು, 15ನೇ ಅಧ್ಯಾಯದಲ್ಲಿ ಆಯ್ದ ಭಾಗಗಳನ್ನು ಒಂದು ಪರಿಚಯ ಭಾಗವಾಗಿ ಬಳಸಬಹುದು.

ಇನ್ನೊಂದು ಸಾಧ್ಯತೆಯೆಂದರೆ ನೀವು ಅಧ್ಯಾಯದಲ್ಲಿರುವ ಹಾಡಿನ ಮೇಲಷ್ಟೆ ಒಂದು ಪ್ರಸಂಗವನ್ನು ಮಾಡಬಹುದು (ವಚನಗಳು 2-4). ಹಳೆಯ ಒಡಂಬಡಿಕೆಯಲ್ಲಿರುವ

ಸಮಾಂತರತೆಯ ವಾಕ್ಯಭಾಗಗಳನ್ನು ಉಲ್ಲೇಖಿಸಬಹುದು. ದೇವರು ಗತಕಾಲದಲ್ಲಿ ತನ್ನ ಜನರನ್ನು ಹೇಗೆ ವಿಮೋಚಿಸಿದನು ಎಂಬುದನ್ನು ದೃಷ್ಟಾಂತಪಡಿಸುವದಕ್ಕೆ ಹಳೆಯ ಹಾಗೂ ಹೊಸ ಒಡಂಬಡಿಕೆಗಳಿಂದ ಉದಾಹರಣೆಗಳನ್ನು ಕೊಡಬಹುದು - ಮತ್ತು ದೇವರು ಈ ದಿನದಲ್ಲೂ ತನ್ನ ಜನರನ್ನು ವಿಮೋಚಿಸುತ್ತಾನೆಂದು ತೋರಿಸುವ ಉದಾಹರಣೆಗಳನ್ನು ಕೊಡಬಹುದು.

## ದೇವರ ಯೋಜನೆ (ಅಧ್ಯಾಯ 15)

ಪ್ರಕಟನೆ ಪುಸ್ತಕವು ನಮಗೆ ಇರಾನ್, ಇರಾಕ್, ಆಧುನಿಕ ಇಸ್ರಾಯೇಲ್ ಅಥವಾ ಐಗುಪ್ತದ ಕುರಿತಾಗಿ, ಅರಬ್ಬರು, ಯೂರೋಪಿಯನ್ ಕಾಮನ್ ಮಾರ್ಕೆಟ್, ಅಥವಾ ಮಧ್ಯಪ್ರಾಚ್ಯದಲ್ಲಿ ನಡೆಯುವ ಯುದ್ಧದ ಕುರಿತಾಗಲಿ ತಿಳಿಯಪಡಿಸಲು ಬರೆಯಲ್ಪಟ್ಟಿಲ್ಲ ಎಂಬುದು ವಿಫುಲವಾಗಿ ಸ್ಪಷ್ಟವಾಗಿರತಕ್ಕದ್ದು.[24] ಬದಲಾಗಿ, ಅದು ಬಿಕ್ಕಟ್ಟಿನ ಸಮಯಗಳಲ್ಲಿ ದೇವರ ಮಕ್ಕಳಿಗೆ ಆದರಣೆಯನ್ನು ನೀಡಿ ಬಲಗೊಳಿಸುವದಕ್ಕೋಸ್ಕರ ಬರೆಯಲ್ಪಟ್ಟಿತು. ಆದಿ ಶತಮಾನಗಳಲ್ಲಿದ್ದ ಕ್ರೈಸ್ತರಿಗೆ 15ನೇ ಅಧ್ಯಾಯದಲ್ಲಿರುವ ಸತ್ಯಗಳ ಅಗತ್ಯತೆಯು ಇತ್ತು, ಮತ್ತು ನಮಗೆ ಸಹ ಅಗತ್ಯವಿರುತ್ತವೆ: (1) ದೇವರು ಒಂದು ಯೋಜನೆಯನ್ನು ಹೊಂದಿದ್ದಾನೆ; (2) ದೇವರು ತನ್ನ ಯೋಜನೆಯನ್ನು ಸಫಲತೆಗೆ ತರುವದಕ್ಕೆ ಶಕ್ತಿಯನ್ನು ಹೊಂದಿದ್ದಾನೆ; (3) ದೇವರು ತನ್ನ ಯೋಜನೆಯನ್ನು ಕಾರ್ಯಸಾಧಿಸುತ್ತಿದ್ದಾನೆ - ಅದು ನಮಗೆ ಆ ರೀತಿಯಾಗಿ ಕಾಣಿಸಿದರೂ ಸರಿಯೇ ಅಥವಾ ಕಾಣಿಸದಿದ್ದರೂ ಸರಿಯೇ.

ಇವುಗಳು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಪ್ರಾಮುಖ್ಯವಾದ ಸತ್ಯಗಳು: ಯಾವದೇ ಸಂದರ್ಭದಲ್ಲಾಗಲಿ, ನಾವು ದೇವರ ಉದ್ದೇಶಗಳನ್ನು ಅರ್ಥಮಾಡಿಕೊಂಡರೂ ಸರಿಯೇ ಅಥವಾ ಅರ್ಥಮಾಡಿಕೊಳ್ಳದಿದ್ದರೂ ಸರಿಯೇ, ದೇವರು ನಮ್ಮ ಜೀವಿತಗಳಿಗೋಸ್ಕರ ಒಂದು ಯೋಜನೆಯನ್ನು ಹೊಂದಿದ್ದಾನೆ ಮತ್ತು ಆತನ ಉದ್ದೇಶಗಳು ಕಾರ್ಯಸಾಧಿಸಲ್ಪಡುತ್ತಿವೆ ಎಂದು ನಾವು ಭರವಸದಿಂದಿರಬಹುದಾಗಿದೆ. “ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ” (ರೋಮಾ 8:28). ಜೀವನದಲ್ಲಿ ಸರಿಯಾದ ದೃಷ್ಟಿಕೋನವನ್ನು ಇಟ್ಟುಕೊಳ್ಳುವದಕ್ಕಾಗಿ, ದೇವರ ಯೋಜನೆಗಳ ಮೇಲೆ ಗಮನವನ್ನು ಕೇಂದ್ರಿಕರಿಸಿರಿ. ಈ ತತ್ವಗಳ ಸುತ್ತ ಕೇಂದ್ರಿಕೃತರಾಗಿರಿ, ಮತ್ತು ನೀವು ಜೀವನದಲ್ಲಿ ಯಾವದೇ ಕಷ್ಟ ಬಂದರೂ ಅದನ್ನು ಜಯಿಸುವದಕ್ಕೆ ಶಕ್ತರಾಗುವಿರಿ.

## ದೇವರ ಮೇಲೆ ಗಮನವನ್ನು ಕೇಂದ್ರಿಕರಿಸಿರಿ (15:3, 4)

3 ಮತ್ತು 4 ವಚನಗಳಲ್ಲಿನ ಹಾಡಿನ ಮೂಲಕವಾಗಿ ನಾವು ಮಾಡಬಲ್ಲ ಅನ್ವಯಿಕೆಯು ಏನೆಂದರೆ, ಪರಲೋಕದ ಗಾಯನವೃಂದದ ಹಾಗೆಯೇ, ನಮ್ಮ ಮೇಲೆ ಗಮನವನ್ನು ಇಟ್ಟುಕೊಳ್ಳುವದರ ಬದಲಾಗಿ ದೇವರ ಮೇಲೆಯೇ ಗಮನವನ್ನು ಕೇಂದ್ರಿಕರಿಸಬೇಕು. ನಾವು ಜಾಗರೂಕರಾಗಿಲ್ಲವಾದರೆ, ನಮ್ಮ ಆರಾಧನೆಯ ಮುಖ್ಯ ಒತ್ತು ನಮ್ಮ ಮೇಲೆಯೇ ಇರಲಿದೆ - ನಾವೇನು ಮಾಡಿದ್ದೇವೆ, ನಾವೇನು ಮಾಡಿಲ್ಲ, ನಾವೇನು ಮಾಡತಕ್ಕದ್ದು, ನಾವೇನು ಮಾಡತಕ್ಕದ್ದಲ್ಲ, ನಾವೇನು ಮಾಡಬೇಕೆಂದು ಯೋಜಿಸಿಕೊಂಡಿದ್ದೇವೆ. ಈ ಮನಸ್ಥಿತಿಯು ಸಂಪೂರ್ಣ ಕೆಟ್ಟದ್ದೇನೂ ಅಲ್ಲ; ನಾವು “ಪ್ರೀತಿಸುತ್ತಿರಬೇಕೆಂತಲೂ

ಸತ್ಕಾರ್ಯಮಾಡಬೇಕೆಂತಲೂ” (ಇಬ್ರಿಯ 10:24) ಪ್ರಚೋದಿಸಲ್ಪಡತಕ್ಕದ್ದು. ಹೇಗೂ, ಕ್ರಮವಾದ ರೀತಿಯಲ್ಲಿ “ನಮ್ಮನ್ನು” ಕುರಿತು ತುಂಬಿಸಿಕೊಳ್ಳುತ್ತಿದ್ದರೆ ಅದು ನಮ್ಮನ್ನು ಆತ್ಮೀಕವಾಗಿ ಉಪವಾಸ ಬಿದ್ದವರನ್ನಾಗಿ ಹಾಗೂ ಖಿನ್ನತೆಗೊಳಗಾದವರನ್ನಾಗಿ ಮಾಡಬಲ್ಲದು. ನಾವು ಏನು *ಮಾಡುವದಕ್ಕೆ ಸಾಧ್ಯವಿಲ್ಲದ*, ದೇವರು ಮಾತ್ರವೇ ಮಾಡಬಲ್ಲದ್ದರ ಮೇಲೆ ಗಮನವನ್ನು ಕೇಂದ್ರಿಕರಿಸಿದರೆ ಉತ್ತಮವಾಗಿರುತ್ತದೆ.

ಬಹಳ ಕಾಲದ ಹಿಂದೆ, ಅರಸನಾದ ಯೆಹೋಷಾಫಾಟನು ವ್ಯಕ್ತಪಡಿಸಿದ ದೃಢವಿಶ್ವಾಸವು ನಮಗೆ ಇಂದು ಅಗತ್ಯವಿರುತ್ತದೆ: “ಯೆಹೋವನೇ, ನಮ್ಮ ಪಿತೃಗಳ ದೇವರೇ, ಪರಲೋಕದಲ್ಲಿ ದೇವರಾಗಿರುವಾತನು ನೀನಲ್ಲವೋ? ನೀನು ಜನಾಂಗಗಳ ಎಲ್ಲಾ ರಾಜ್ಯಗಳನ್ನು ಆಳುವವನಾಗಿರುತ್ತೀ. ನಿನ್ನ ಹಸ್ತದಲ್ಲಿ ಬಲಪರಾಕ್ರಮಗಳಿರುತ್ತವೆ; ನಿನ್ನೆದುರಿನಲ್ಲಿ ಯಾರೂ ನಿಲ್ಲಲಾರರು” (2 ಪೂರ್ವಕಾಲವೃತ್ತಾಂತ 20:6). ನಾವು ಕರ್ತನ ಸನ್ನಿಧಿಯೊಳಗೆ ಬರುವಾಗ, ಆತನ ಶಕ್ತಿಯ ಕುರಿತು ಧ್ಯಾನಿಸೋಣ: ಆತನು ಏನು ಮಾಡಿದ್ದಾನೆ, ಆತನು ಏನು ಮಾಡುತ್ತಿದ್ದಾನೆ, ಮತ್ತು ಆತನು ಏನು ಮಾಡುತ್ತೇನೆಂದು ವಾಗ್ದಾನ ಮಾಡಿದ್ದಾನೆ.

---

**ಅಡಿಟಿಪ್ಪಣಿಗಳು**

[1]John Risse, “The last Word on Scripture,” Southern Hills church of Christ, Abilene, Texas, 16 September 1990 ಭೋದಿಸಿದ ಪ್ರಸಂಗ. [2]G. B. Caird, *A Commentary on the Revelation of St. John the Divine*, Harper’s New Testament Commentaries, ed. Henry Chadwick (London: Adam & Charles Black, 1966), 197. [3]*The Analytical Greek Lexicon* (London: Samuel Bagster & Sons, 1971), 401. [4]James M. Efird, *Revelation for Today* (Nashville: Abingdon Press, 1989), 97. [5]Tertullian *The Martyrdom of Perpetua and Felicitas* 6.1. [6]Albertus Pieters, *Studies in the Revelation of St. John* (Grand Rapids, Mich.: Wm. B. Eerdmans Publishing Co., 1954), 243. [7]George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 204–5. [8]Ray Summers, *Worthy Is the Lamb* (Nashville: Broadman Press, 1951), 184. [9]Alfred Plummer, *Revelation*, The Pulpit Commentary, ed. H. D. M. Spence and Joseph S. Exell, vol. 22 (Grand Rapids, Mich.: Wm. B. Eerdmans Publishing Co., 1950), 382. [10]Ladd, 205.

[11]Robert Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 287. [12]Martin H. Franzmann, *The Revelation to John* (St. Louis: Concordia Publishing House, 1976), 105. [13]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 84ದಿಂದ ಆಯ್ದುಕೊಳ್ಳಲಾಗಿದೆ. [14]Caird, 198. Cairdನು “ಸಂಗ್ರಹಣೆ” ಎಂಬುದರ ಬದಲಾಗಿ “ಕವುದಿಕೃತಿ” ಎಂಬ ಪದವನ್ನು ಬಳಸಿದನು. ಒಂದು “ಕವುದಿಕೃತಿ” ಎಂಬುದು ಹಲವಾರು ಲೇಖಕರ ಕೃತಿಗಳಿಂದ ಆಯ್ದು ಬೆರೆಕೆ ಮಾಡಿದ ಕೃತಿಯಾಗಿರುತ್ತದೆ. [15]Ladd, 205. [16]David Roper, *Jesus Christ and Him Crucified* (Arvada, Colo: Christian Communications, 1976), 41. [17]D. T. Niles, *As Seeing the Invisible: A Study of the Book of Revelation* (New York: Harper & Brothers, Publishers, 1961), 84. [18]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 229. [19]W. E. Vine, Merrill F. Unger, and William White, Jr., *Vine’s Complete Expository Dictionary of Old and New Testament Words* (Nashville: Thomas Nelson Publishers, 1985), 688. [20]Ibid., 26.

[21]Ibid. [22]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co.,

1974), 233. [23]Ralph Earle, "Revelation," in *Hebrews Through Revelation*, Beacon Bible Commentary (Kansas City, Mo.: Beacon Hill Press, 1967), 10:584–86. [24]Milo Hadwin, *The Overcomers: Sermons on Revelation* (Arlington, Tex.: Mission Printing, n.d.), 157.